# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:275 | ನೋಂದಣಿ ನಂ.:KARKAN27911 | ವಿಜಯನಗರ | 29.03.2024 | ಶುಕ್ರವಾರ | ಪುಟ:04 | ಬೆಲೆ:2 |
| Volume:01 | Issue:275 | Reg.No:KARKAN27911 | VIJAYANAGARA | 29.03.2024 | Friday | Page:04 | Rs:2 |







# ಆಮಿಷಗೊಳಗಾಗದೆ ಮತ ಚಲಾಯಿಸಿ

## ನರೇಗಾ ಸಹಾಯಕ ನಿರ್ದೇಶಕ ಯು.ಎಚ್.ಸೋಮಶೇಖರ್ ಹೇಳಿಕೆ | ನಂದಿಕಂಬ ಕೆರೆಯ ಕಾಮಗಾರಿ ಸ್ಥಳದಲ್ಲಿ ಸ್ವೀಪ್ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹರಪನಹಳ್ಳಿ**

ಲೋಕಸಭಾ ಸಾರ್ವತ್ರಿಕ ಚುನಾವಣೆಯು ಮೇ 07 ರಂದು ನಡೆಯಲಿದ್ದು, ಎಲ್ಲರೂ ತಪ್ಪದೇ ಮತ ಚಲಾಯಿಸಬೇಕು ಎಂದು ಹರಪನಹಳ್ಳಿ ತಾಲೂಕು ಪಂಚಾಯಿತಿಯ ನರೇಗಾ ಸಹಾಯಕ ನಿರ್ದೇಶಕ ಯು.ಎಚ್.ಸೋಮಶೇಖರ್ ಹೇಳಿದರು.

ತಾಲೂಕಿನ ಪುಣಭಗಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಂದಿಕಂಬ ಗ್ರಾಮದ ಕೆರೆ ಅಂಗಳದ ನರೇಗಾ ಕಾಮಗಾರಿ ಸ್ಥಳದಲ್ಲಿ ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಸ್ವೀಪ್ ಕಾರ್ಯಕ್ರಮದಲ್ಲಿ ಮಾತನಾಡಿದರು.

ನರೇಗಾ ಕೂಲಿ ಕೆಲಸಕ್ಕೆ ಹೋದರೂ ಮನೆಗೆ ಬಂದ ತಕ್ಷಣ ಕೂಲಿಕಾರರು ತಪ್ಪದೇ ಮತದಾನ ಮಾಡಬೇಕು. ಇದೊಂದು ಚುನಾವಣಾ ಹಬ್ಬವಾಗಿರಲಿದ್ದು, ಮತದಾರರು ಇದರಲ್ಲಿ ಪಾಲ್ಗೊಳ್ಳಬೇಕು. ಅದೇ ರೀತಿ ನರೇಗಾ ಕೂಲಿ ಕಾರ್ಮಿಕರು ಬೆಳಗ್ಗೆ ಬೇಗ ಹೋಗಿ ಕೊಟ್ಟ ಅಳತೆಯಲ್ಲಿ ಕೆಲಸ ಮಾಡಿ ಸರಿಯಾದ ಸಮಯಕ್ಕೆ ಹಾಜರಿ ಪಡೆದು ಮನೆಗೆ ಬಂದ ತಕ್ಷಣ ಮತದಾನ ಮಾಡಬೇಕು. ಕೆಲಸಕ್ಕೆ ಹೋಗಿ ಮನೆಗೆ ಬಂದ ತಕ್ಷಣ ಮಲಗುವುದು ಅಲ್ಲ. ಅಗತ್ಯ ಬಿದ್ದರೆ 5ರಿಂದ 10 ನಿಮಿಷ ವಿಶ್ರಾಂತಿ ಪಡೆದು ಆದರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಕಡ್ಡಾಯವಾಗಿ ಮತದಾನ ಮಾಡುವುದು ಎಲ್ಲರ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿಯೂ ಆಗಿದೆ. ನರೇಗಾ ಕೂಲಿ ಕಾರ್ಮಿಕರು ಕಡ್ಡಾಯ ಕೆಲಸ ಹಾಗೂ ಕೂಲಿ ಹಣ ಪಡೆಯುತ್ತೇವೆಯೋ ಅದೇ ರೀತಿ ಮತದಾನವನ್ನೂ ಮಾಡಬೇಕು. ಯಾವುದೇ ಆಸೆ ಆಮಿಷಕ್ಕೆ ಒಳಗಾಗದೇ ತಮ್ಮ ಹಕ್ಕು ಚಲಾಯಿಸಬೇಕು ಎಂದು ತಿಳಿಸಿದರು.

ನರೇಗಾ ಕೂಲಿ ಕಾರ್ಮಿಕರು ಒಂದೇ ವೇಳೆ ವೋಟರ್ ಐಡಿ ಕಾರ್ಡ್ ಕಳೆದುಕೊಂಡಿದ್ದರೂ ನರೇಗಾ ಉದ್ಯೋಗ ಚೀಟಿ ತೋರಿಸಿಯಾದರೂ ಮತ ಚಲಾಯಿಸಬಹುದು. ಆದರೆ, ಮತದಾರರಪಟ್ಟಿಯಲ್ಲಿ ಹೆಸರು ಇರಬೇಕು. ಇದರ ಜತೆಗೆ 80 ವರ್ಷ ಮೇಲ್ಪಟ್ಟವರು ಹಾಗೂ ನಡೆದಾಡಲು ಸಾಧ್ಯವೆ ಇಲ್ಲ ಅನ್ನುವಂತ ಅಂಗವಿಕಲರಿಗೆ ಮನೆಯಿಂದಲೇ ಮತದಾನ ಮಾಡಲು ಅವಕಾಶ ನೀಡಲಾಗುತ್ತದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ತಾಲೂಕು ಐಇಸಿ ಸಂಯೋಜಕ ಕೆ.ವಸಿಗೇರಪ್ಪ ಚಾಗನೂರು, ಪಿಡಿಒ ಸಮುದ್ರಿ ಮಂಜುನಾಥ, ತಾಂತ್ರಿಕ ಸಹಾಯಕ ಅಭಿಯಂತರ ಮಹಾಂತೇಶ್ ಎಂ, ಬಿಎಫ್‌ಟಿ ಸೇರಿದಂತೆ ಗ್ರಾಪಂ ಸಿಬ್ಬಂದಿ, ನರೇಗಾ ಕೂಲಿಕಾರರು ಇತರರಿದ್ದರು.



**ಹರಪನಹಳ್ಳಿ ತಾಲೂಕಿನೆಲ್ಲಡೆ ಜಾಗೃತಿ:** ಹರಪನಹಳ್ಳಿ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ನಡೆಯುತ್ತಿರುವ ನರೇಗಾ ಕಾಮಗಾರಿ ಸ್ಥಳಗಳಲ್ಲಿ ಹಾಗೂ ಗ್ರಾಪಂ ವ್ಯಾಪ್ತಿಯ ಎಲ್ಲ ಕೇಂದ್ರ ಸ್ಥಾನ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ನಿರಂತರ ಕೆಲಸದ ಜತೆಗೆ ನಮ್ಮ ನಮ್ಮ ಜವಾಬ್ದಾರಿಗಳನ್ನು ಸರಿಯಾಗಿ ಅರ್ಥೈಸಿಕೊಂಡು ನಮ್ಮ ಹಕ್ಕು ಚಲಾಯಿಸಿದಲ್ಲಿ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯ ಘನತೆ ಹೆಚ್ಚಲು ಸಾಧ್ಯ ಎಂದು ತಿಳಿಸಲಾಯಿತು. ಈ ಸಂದರ್ಭದಲ್ಲಿ ಆಯಾ ಗ್ರಾಮ ಪಂಚಾಯಿತಿಯ ಪಿಡಿಒ, ಡಾಟಾ ಎಂಟ್ರಿ ಆಪರೇಟ?ಸ್, ನರೇಗಾ ತಾಂತ್ರಿಕ ಸಹಾಯಕ ಅಭಿಯಂತರರು, ಬಿಎಫ್‌ಟಿಗಳು, ಜಿಕೆಎಂಗಳು, ತಾಂಡಾ ರೋಜಗಾರ್ ಮಿತ್ರರು ಪಾಲ್ಗೊಂಡಿದ್ದರು.

> ಚುನಾವಣೆ ಎಂಬ ಪ್ರಜಾಪ್ರಭುತ್ವ ಹಬ್ಬದಲ್ಲಿ ಎಲ್ಲರೂ ಮತದಾನ ಮಾಡಿದರೆ ಮಾತ್ರ ಇದರ ವಿಶೇಷತೆ, ಮಹತ್ವ ಹೆಚ್ಚಾಗುತ್ತದೆ. ಹೀಗಾಗಿ ಈ ಹಬ್ಬದಲ್ಲಿ ಎಲ್ಲರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಯಾವುದೇ ನೆಪ, ಕಾರಣ ಹೇಳದೆ ಎಲ್ಲರೂ ವೋಟ್ ಹಾಕಬೇಕು. ಈ ಪ್ರಜಾಪ್ರಭುತ್ವಕ್ಕೆ ಇಡೀ ಪ್ರಪಂಚವೇ ತಿರುಗಿ ಶಕ್ತಿ ನೋಡುವ ಶಕ್ತಿ ಇದೆ. ಅದನ್ನು ಪ್ರತೀ ಚುನಾವಣೆಯಲ್ಲಿ ಪ್ರತಿಯೊಬ್ಬ ನಾಗರಿಕ ಮತ ಚಲಾಯಿಸುವ ಮೂಲಕ ಗಟ್ಟಿಗೊಳಿಸಬೇಕಿದೆ.
>
> – **ಯು.ಎಚ್.ಸೋಮಶೇಖರ್,** ನರೇಗಾ ಸಹಾಯಕ ನಿರ್ದೇಶಕ, ಹರಪನಹಳ್ಳಿ ತಾಲೂಕು ಪಂಚಾಯಿತಿ


**ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ**

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್ಎಸ್ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

**98441 25317**
**99861 33299**

**ಹೊಲ ಮಾರಾಟಕ್ಕಿದೆ**

ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ವ್ಯಾಪ್ತಿಯ ಡಣಾಯಕನ ಕೆರೆ ಕ್ರಾಸ್ ಬಳಿ ಕೂಡ್ಲಿಗಿ–ಹೊಸಪೇಟೆ ಎನ್.ಎಚ್ ರೋಡ್(NH ROAD) ಪಕ್ಕದಲ್ಲಿ 4 ಎಕರೆ ಹೊಲ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

Contact: **94497 39665**


# ವಿಶ್ವಮಟ್ಟದ ಜಾನಪದ ತಜ್ಞ ಡಾ. ಮಲಶೆಟ್ಟಿ

## ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅಭಿಮತ | ವಿಚಾರ ಸಂಕಿರಣ ಮತ್ತು ಪುಸ್ತಕ ಬಿಡುಗಡೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಸಾಹಿತ್ಯ, ಸಂಸ್ಕೃತಿ, ಜಾನಪದ, ರಂಗಭೂಮಿ ಕ್ಷೇತ್ರದಲ್ಲಿ ದುಡಿದ ಡಾ.ಬಸವರಾಜ ಮಲಶೆಟ್ಟಿಯವರು ಅಪರೂಪದ ವಿದ್ವಾಂಸರಾಗಿದ್ದರು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಹೇಳಿದರು.

ನಗರದ ಶಾ. ಭವರಲಾಲ್ ಬಾಬುಲಾಲ್ ನಹರ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಗುರುವಾರ ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಹೊಸಪೇಟೆ ತಾಲೂಕು ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ.ಬಸವರಾಜ ಮಲಶೆಟ್ಟಿ ದತ್ತಿ ವಿಚಾರ ಸಂಕಿರಣ ಮತ್ತು ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಸಂಘಟನೆ, ಪಾಠ ಬೋಧನೆ, ಕ್ಷೇತ್ರಕಾರ್ಯ ಹಾಗೂ ಜಾನಪದ ಕ್ಷೇತ್ರದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದರು. ಇವರು ಬೆಂಗಳೂರು ಅಥವಾ ಮೈಸೂರಿನಲ್ಲೂ ಇದ್ದಿದ್ದರೆ ವಿಶ್ವಮಟ್ಟದ ಜಾನಪದ ತಜ್ಞರಾಗಿ ಹೆಸರು ಮಾಡುತ್ತಿದ್ದರು. ಹೊಸಪೇಟೆಯಂತಹ ಕಾಲೇಜಿನ >>4



> ಬಸವರಾಜ ಮಲಶೆಟ್ಟಿ ಅವರು ಜಾನಪದ ಸಾಹಿತ್ಯ, ರಂಗಭೂಮಿಗೂ ನೀಡಿದ ಕೊಡುಗೆ ಅಪಾರ. ಮುದೇನೂರು ಸಂಗಣ್ಣ, ಜೋಳದರಾಶಿ ದೊಡ್ಡನಗೌಡ, ಎಂ.ಪಿ ಪ್ರಕಾಶ್ ಅವರಂಥ ರಂಗಕರ್ಮಿಗಳ ಸಹವಾಸದಲ್ಲಿ ಇದ್ದು, ಗಿರಿಜಾಕಲ್ಯಾಣದಂತಹ ಬಯಲಾಟವನ್ನು ಎರಡು ತಾಸಿಗೆ ಪರಿಷ್ಕರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.
>
> – **ಎಂ.ಎಂ.ಶಿವಪ್ರಕಾಶ್** ಕನ್ನಡ ವಿವಿ ಸಹಾಯಕ ಕುಲಸಚಿವ

> ಡಾ.ಬಸವರಾಜ ಮಲಶೆಟ್ಟಿಯವರು ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯವಾದುದು. ಕ್ಷೇತ್ರಕಾರ್ಯದ ಮೂಲಕ ಜಾನಪದ ಸಂಶೋಧನೆಯನ್ನು ಮಾಡಿದವರು. ಇವರು ಸಂಗ್ರಹಿಸಿದ ಲಾವಣಿಗಳು, ಜನಪದ ಕಥೆಗಳು ಇತಿಹಾಸದ ರಚನೆಗೆ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಆಕರಗಳಾಗಿವೆ.
>
> – **ಡಾ. ಚಲುವರಾಜು** ಡೀನ್ ಕನ್ನಡ ವಿವಿ ಸಮಾಜ ವಿಜ್ಞಾನಗಳ ನಿಕಾಯ

# 8 ದಿನಗಳಿಗೊಮ್ಮೆ ಕುಡಿಯುವ ನೀರು

■ **ಹಂಪಿ ಟೈಮ್ಸ್ ಬಳ್ಳಾರಿ**

ಸಿರುಗುಪ್ಪ ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರನ್ನು 8 ದಿನಗಳಿಗೊಮ್ಮೆ ಸರಬರಾಜು ಮಾಡಲಾಗುವುದು ಎಂದು ಸಿರುಗುಪ್ಪ ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಸಮಪರ್ಕವಾಗಿ ಮಳೆಯಾಗದೆ ಬರಗಾಲ ಉದ್ಭವಿಸಿರುವುದರಿಂದ, ತುಂಗಭದ್ರಾ ನದಿಯಲ್ಲಿ ನೀರು ಬತ್ತಿ ಹೋಗಿರುತ್ತದೆ. ಸಿರುಗುಪ್ಪ ನಗರದ ಬಳ್ಳಾರಿ ರಸ್ತೆಯಲ್ಲಿರುವ ಕುಡಿಯುವ ನೀರಿನ ಕೆರೆಯಲ್ಲಿಯೂ ನೀರಿನ ಸಂಗ್ರಹಣೆ ಕಡಿಮೆ ಇರುವುದರಿಂದ ಮುಂದಿನ ದಿನಗಳಲ್ಲಿ ಸಿರುಗುಪ್ಪ ನಗರಕ್ಕೆ ಭೀಕರ ಕುಡಿಯುವ ನೀರಿನ ಅಭಾವ ಉಂಟಾಗುವ ಸಂಭವವಿರುತ್ತದೆ. ಹೀಗಾಗಿ ಇದಕ್ಕೂ ಮುನ್ನ ಸಿರುಗುಪ್ಪ ನಗರ ವ್ಯಾಪ್ತಿಯಲ್ಲಿ ಕೆರೆಯಲ್ಲಿರುವ ನೀರನ್ನು 5 ದಿನಗಳಿಗೊಮ್ಮೆ ಸರಬರಾಜು ಮಾಡಲಾಗುತಿತ್ತು. ಬರುವ ಏಪ್ರೀಲ್ 02 ರಿಂದ ಕೆರೆಯ ನೀರನ್ನು 5 ದಿನಗಳ ಬದಲಾಗಿ 8 ದಿನಗಳಿಗೊಮ್ಮೆ ಸರಬರಾಜು ಮಾಡಲಾಗುತ್ತದೆ. ಮುಂದೆ ಎದುರಾಗಬಹುದಾದ ಭೀಕರ ಕುಡಿಯುವ ನೀರಿನ ಅಭಾವವನ್ನು ನೀಗಿಸುವ ಹಿತದೃಷ್ಟಿಯಿಂದ ನಗರಸಭೆಯು ಈ ಕ್ರಮ ಕೈಗೊಂಡಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ಕುಣಿಕೇರಿ ಗ್ರಾ.ಪಂ ವ್ಯಾಪ್ತಿಯಲ್ಲಿ ಲೋಕಸಭಾ ಚುನಾವಣೆ ಸ್ವೀಪ್ ಕಾರ್ಯಕ್ರಮ



**ಹಂಪಿ ಟೈಮ್ಸ್ ಕೊಪ್ಪಳ**

ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ತ ಮತದಾನ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲು ಕೊಪ್ಪಳ ತಾಲೂಕಿನ ಕುಣಿಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕುಣಿಕೇರಿ ತಾಂಡಾದಲ್ಲಿ ಮತದಾರರಿಂದ ಶುಕ್ರವಾರ ಸ್ವೀಪ್ ಜಾಥಾ ಕಾರ್ಯಕ್ರಮ ಜರುಗಿತು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು ಹಾಗೂ ತಾಲೂಕ ಯೋಜನಾಧಿಕಾರಿಗಳು ಮತದಾನ ಕುರಿತು ತಿಳಿಸಿದರು.

ಸ್ವೀಪ್ ಜಾಥಾವು ಗ್ರಾಮದ ದುರ್ಗಾದೇವಿ ದೇವಸ್ಥಾನದಿಂದ ಆರಂಭವಾಗಿ ತಾಂಡಾದ ಬೀದಿಗಳಲ್ಲಿ ಸಂಚರಿಸಿ "ನಮ್ಮ ಮತ, ನಮ್ಮ ಹಕ್ಕು" ಇತ್ಯಾದಿ ಘೋಷಣೆಗಳೊಂದಿಗೆ ಸಾಗಿ ಮುಕ್ತಾಯಗೊಂಡಿತು. 60ಕ್ಕೂ ಹೆಚ್ಚು ತಾಂಡಾದವರು ಭಾಗವಹಿಸಿದ್ದರು.

ಸ್ವೀಪ್ ಕಾರ್ಯಕ್ರಮದಲ್ಲಿ ತಾಲೂಕ ಸ್ವೀಪ್ ಸಮಿತಿ ಸದಸ್ಯರು, ತಾಲೂಕ ಐಇಸಿ ಸಂಯೋಜಕರು, ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮಸ್ಥರು, ಗ್ರಾಮ ಪಂಚಾಯತಿ ಸಿಬ್ಬಂದಿಗಳು ಹಾಜರಿದ್ದರು.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
>
> ಡಿ..ವಿ.ಜಿ.

# ಕತ್ತಲೋಡಿಸಲು ಸದ್ವಿಚಾರಗಳ ಚಿಮಣಿ ಅವಶ್ಯ

## ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿಕೆ | ವಿಶ್ವಧರ್ಮ ಪ್ರವಚನ

■ **ಹಂಪಿ ಟೈಮ್ಸ್ ಹೊಸಪೇಟೆ**

ಜೀವನದಲ್ಲಿ ಎದುರಾಗುವ ಕಷ್ಟಗಳು ಕತ್ತಲಿದ್ದಂತೆ. ಕತ್ತಲನ್ನು ಹೇಗೆ ಓಡಿಸಬೇಕೆಂದು ಚಿಂತಿಸುತ್ತಾ ಕೂಡುವುದಕ್ಕಿಂತ ಸತ್ಸಂಗದ ವಿಚಾರಗಳ ಚಿಮಣಿ ಹಿಡಿದು ಸಾಗಿದರೆ ಕತ್ತಲು ದೂರಾಗುತ್ತದೆ. ಭೌತಿಕ ವಸ್ತುಗಳ ಸಂಪಾದನೆಯಲ್ಲೆ ಜೀವನ ಕಳೆಯುವುದಕ್ಕಿಂತ, ಸಾರ್ಥಕ ಜೀವನಕ್ಕೆ ಬೇಕಾದ ಸದ್ವಿಚಾರಗಳ ಸಂಪಾದನೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಕೊಟ್ಟೂರು ಸಂಸ್ಥಾನ ಮಠದ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.



ನಗರದ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ಸರ್ವಧರ್ಮ ಸಮನ್ವರ ರಥೋತ್ಸವ ನಿಮಿತ್ತ ಜರುಗುತ್ತಿರುವ ವಿಶ್ವಧರ್ಮ ಪ್ರವಚನದಲ್ಲಿ ಬುಧವಾರ ಸಂಜೆ ಆಶೀರ್ವಚನ ನೀಡಿದರು. ಕಣ್ಣಿಗೆ ಕಾಣುವ ವಸ್ತುಗಳು ಅಗತ್ಯಕ್ಕಿಂತ ಮೀರಿದರೆ ಸಂತೋಷವನ್ನಷ್ಟೇ ಅಲ್ಲ ದುಃಖವನ್ನು ಕೊಡಬಲ್ಲವು. ಕಣ್ಣಿಗೆ ಕಾಣುವ ವಸ್ತುಗಳು ಶಾಶ್ವತವಲ್ಲ. ಭೌತಿಕ ಸಂಪತ್ತು ನನ್ನದಲ್ಲ ಎಂಬುದನ್ನು ಮೊದಲು ಅರಿಯಬೇಕು. ತಂದೆ ತಾಯಿ ದೃಷ್ಟಿಯಿಂದ ದೂರಾದರೆ ಕಾಲಾಂತರದಲ್ಲಿ ಅವರನ್ನು ಮರೆಯುವುದು ಹೇಗೆ ಸಹಜವೋ ಹಾಗೆ ಭೌತಿಕ ಸಂಪತ್ತು. ಎಲ್ಲವನ್ನೂ ಪ್ರೇಮದಿಂದ ನೋಡವು ಕಣ್ಣುಗಳು, ಪ್ರತಿ ವಿಚಾರಗಳನ್ನು ಒಳ್ಳೆಯ ಭಾವನೆಯಿಂದ ಕೇಳುವ ಕಿವಿಗಳು ನಮ್ಮದಾಗಿಸಿಕೊಳ್ಳಬೇಕು. ದೇವರು ಎಲ್ಲಾ ಕಡೆ ಎಲ್ಲಾ ವಸ್ತುಗಳಲ್ಲಿ ಇದ್ದಾನೆ ಎಂಬುದು ಬಸವಾದಿ ಶರಣರು ಹೇಳಿದ್ದಾರೆ. ದೇವರನ್ನು ಹುಡುಕಬೇಕಿಲ್ಲ. ಎಲ್ಲೆಡೆ ಭಗವಂತನಿದ್ದಾನೆ ಎಂಬ ಅಚಲ ಮನಸ್ಸಿನಿಂದ ತಾವು ಮಾಡುವ ಕಾಯಕದಲ್ಲಿ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದರೆ ನಿಮಗೆ ಶಿವನಿದ್ದಾನೆ ಎಂಬ ನಂಬಿಕೆ ನಿಮಗರಿವಿಲ್ಲದಂತೆ ನಿಮ್ಮೊಳಗೆ ಭಾಸವಾಗುವುದು. ನಾವು ನೋಡುವ ದೃಷ್ಟಿಕೋನ, ನಡೆ, ನುಡಿಗಳಿಂದ ಜೀವನವನ್ನು ಸಂತೋಷವಾಗಿಟ್ಟುಕೊಳ್ಳಲು ಸಾಧ್ಯವಿದೆ. ಕಷ್ಟಕಾರ್ಪಣ್ಯಗಳು ಎಲ್ಲರ ಜೀವನದಲ್ಲಿ ಬಂದು ಹೋಗುವುದು ಸಹಜ. ಅವುಗಳಿಂದ ನೊಂದುಕೊಳ್ಳದೆ, ಅದು ಶಿವನ ಪ್ರಸಾದವೆಂದು ಭಾವಿಸಿದರೆ ಗುಡ್ಡದಂತಿರುವ ಸಮಸ್ಯೆಗಳು ಕಡ್ಡಿಯಾಗಬಲ್ಲವು. ಭೌತಿಕ ಶ್ರೀಮಂತಿಕೆ ಸದಾ ಸಂತೋಷ ತರಲಾರದು. ಫಲಾಪೇಕ್ಷೆ ಇಲ್ಲದೇ ಸತ್ಸಂಗಗಳಲ್ಲಿ ಭಾಗಿಯಾಗಿ ಸದ್ವಿಚಾರಗಳನ್ನು ಆಲಿಸಿದರೆ ಆನಂದದ ಜೀವನ ನಮ್ಮದಾಗಿಸಿಕೊಳ್ಳಬಹುದು. ಎಲ್ಲರದ್ದು ಸಾರ್ಥಕ ಜೀವನವಾಗಲಿ ಎಂದು ಹರಿಸಿದರು. ಶಶಿಧರ ಶಾಸ್ತ್ರಿಗಳು ನೆರೆದವರ ಮನಮುಟ್ಟುವಂತೆ ಸದ್ವಿಚಾರಗಳ ಕುರಿತು ಪ್ರವಚನ ಉಣಬಡಿಸಿದರು. ಕೊಟ್ಟೂರು ಸಂಸ್ಥಾನ ಮಠದ ಶಾಖಾ ಮಠಗಳ ಶ್ರೀಗಳು ಉಪಸ್ಥಿತರಿದ್ದರು.




## ವಚನ ಅರಿವು

### ಒಪ್ಪುವಂತಿರಬೇಕು


**ಅಸಿ ಕೃಷಿ ಮಸಿ ಯಾಚಕ ವಾಣಿಜ್ಯತ್ವವ ಮಾಡುವುದು ಲೇಸು.**
**ಹುಸಿವೇಷವ ತೊಟ್ಟು ಅಸುವ ಹೊರೆವವನ ಘಟ**
**ಪಿಶಿತದ ತಿತ್ತಿಯಂತೆ ಅಘಟಿತ, ಅವನನೊಲ್ಲ ಅರ್ಕೇಶ್ವರಲಿಂಗ.**
**– ಮಧುವಯ್ಯ**

**ಮನುಷ್ಯ ತನ್ನ ಯೋಗ್ಯತೆಗೆ ತಕ್ಕ ಯಾವುದಾದರು ವೃತ್ತಿಯನ್ನು ಮಾಡಬಹುದು. ಕಾಯಕ ಪ್ರಜ್ಞೆಯಿಂದ, ಪ್ರಾಮಾಣಿಕತೆಯಿಂದ ಮಾಡುತ್ತಿರಬೇಕು. ಖಡ್ಗವನ್ನು ಹಿಡಿದು ರಾಜ್ಯವನ್ನು ಆಳುವ, ಸೈನಿಕನಾಗಿ ರಾಜ್ಯವನ್ನು ಕಾಪಾಡುವುದು, ರೈತನಾಗಿ ಬೇಸಾಯವನ್ನು ಮಾಡುವುದು, ಬೋಧನೆ, ಬೌದ್ಧಿಕ ಕಾಯಕವನ್ನು ಮಾಡುವುದು, ವ್ಯಾಪಾರ ಮಾಡುವುದು ತಮಗೂ ಒಳ್ಳೆಯದು, ಸಮಾಜಕ್ಕೂ ಒಳ್ಳೆಯದು. ಅಸಹಾಯಕನಾಗಿದ್ದರೆ ಭಿಕ್ಷೆ ಬೇಡಿದರೂ ಯಾರಿಗೂ ತೊಂದರೆಯಾಗುವುದಿಲ್ಲ. ಮೋಸ, ವಂಚನೆ, ದ್ರೋಹವನ್ನು ಮಾಡದೆ ಪ್ರಾಮಾಣಿಕವಾದ, ನಿಷ್ಠೆಯ ಕಾಯಕ ಮಾಡುವುದು ಶ್ರೇಷ್ಠವಾಗುತ್ತದೆ. ಸುಳ್ಳು ಹೇಳುತ್ತ, ಕಪಟ ವೇಷದಲ್ಲಿ ಮೋಸಮಾಡಿ ಜೀವನ ಸಾಗಿಸುವವನು ಮಾಂಸ ತುಂಬಿದ ಚೀಲವಿದ್ದಂತೆ ಇಂತಹವರು ಅಯೋಗ್ಯರು. ಇವರನ್ನು ಸಮಾಜವಾಗಲಿ, ಶಿವನಾಗಲಿ ಮೆಚ್ಚುವುದಿಲ್ಲ. ಇವರಿಗೆ ಅರಿವು ಸ್ವಯವಾಗುವುದಿಲ್ಲ ಎನ್ನುತ್ತಾನೆ ಶರಣ ಮಧುವಯ್ಯ.**

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ಸಾಂದರ್ಭಿಕ ಸುಳ್ಳು ಅನಿವಾರ್ಯ



■ **ದೀಪಶ್ರೀ ಎಸ್ ಕೂಡ್ಲಿಗಿ**

ಗುರುಗಳು ಒಮ್ಮೆ ತನ್ನ ಎಲ್ಲ ಶಿಷ್ಯರನ್ನು ಕರೆದು ಹಳೆಯದಾದ ಗುಡಿಸಲನ್ನು ಪುನಃ ಹೊಸದಾಗಿ ನಿರ್ಮಿಸಲು ಅಗತ್ಯವಿರುವ ಕಟ್ಟಿಗೆಗಳನ್ನು ತರಲು ಅರಣ್ಯಕ್ಕೆ ಹೋಗಿ ಬರುವಂತೆ ಆದೇಶ ನೀಡಿದರು. ಗುರುಗಳ ಆಜ್ಞೆಯ ಅನುಸಾರ, ಎಲ್ಲ ಶಿಷ್ಯರು ಅರಣ್ಯಕ್ಕೆ ಹೊರಟರು. ಅರಣ್ಯದಲ್ಲಿ ಉತ್ತಮ ಕಟ್ಟಿಗೆಗಳನ್ನು ಹುಡುಕುತ್ತಾ ಸಂಚಾರ ಮಾಡಿದರು. ಕಟ್ಟಿಗೆಗಳನ್ನು ಪಡೆದರು. ಅವರಲ್ಲಿ ಶಿಷ್ಯನೊಬ್ಬ ಹಣ್ಣುಗಳಿಂದ ತುಂಬಿರುವ ಮರವನ್ನು ಕಂಡನು. ಮರವನ್ನು ಏರಿ ಹಣ್ಣುಗಳನ್ನು ಕೀಳುತ್ತಿರುವಾಗ, ಉಳಿದವರೆಲ್ಲರೂ ಹಣ್ಣುಗಳನ್ನು ತಮಗೂ ಕೊಡುವಂತೆ ಕೇಳಿದರು. ಅದಕ್ಕೆ ಶಿಷ್ಯ ಈ ಹಣ್ಣುಗಳನ್ನು ಯಾರಿಗೂ ಕೊಡುವುದಿಲ್ಲ, ಹಣ್ಣುಗಳನ್ನು ತಿನ್ನುವ ಹಕ್ಕು ಗುರುಗಳಿಗೆ ಮಾತ್ರವೇ ಇದೆ. ಫಲಭರಿತ ಹಣ್ಣುಗಳನ್ನು ಗುರುಗಳು ಮಾತ್ರ ಸವಿಯಬೇಕು ಎಂದನು. ಸ್ನೇಹಿತರೆಲ್ಲ ಮೂಗು ಮುರಿದರು. ಕಟ್ಟಿಗೆಗಳನ್ನು ತಂದು ಆಶ್ರಮಕ್ಕೆ ಬಂದ ಶಿಷ್ಯ ತಾನು ತಂದ ಹಣ್ಣುಗಳನ್ನು ಗುರುಗಳಿಗೆ ಕೊಟ್ಟು, ದಯಮಾಡಿ ಈ ಹಣ್ಣುಗಳನ್ನು ಸೇವಿಸಿ ಅದರ ರುಚಿಯನ್ನು ತಿಳಿಸಿ ಎಂದನು. ಆಗ ಗುರುಗಳು ಹಣ್ಣೊಂದನ್ನು ತಿಂದು ಈ ಹಣ್ಣು ತುಂಬಾ ರುಚಿಯಾಗಿದೆ ನನಗೆ ತುಂಬಾ ಆನಂದವಾಯಿತು ಎಂದರು. ಈ ಮಾತನ್ನು ಕೇಳಿ ಶಿಷ್ಯನಿಗೆ ಅತೀವ ಸಂತೋಷವಾಯಿತು. ಗುರುಗಳು ಶಿಷ್ಯನಿಗೆ ಹಣ್ಣನ್ನು ಕೊಡಲು ಮುಂದಾದಾಗ, ಶಿಷ್ಯನು ಹಣ್ಣನ್ನು ತೆಗೆದುಕೊಳ್ಳಲು ನಿರಾಕರಿಸಿದ. ಆಗ ಶಿಷ್ಯ ಗುರುಗಳಿಗೆ ಹೇಳುತ್ತಾನೆ, "ನಾನು ಈ ಹಣ್ಣುಗಳನ್ನು ಕಂಡಾಗ ನಿಮಗೆ ತೆಗೆದುಕೊಂಡು ಬರಬೇಕು ಎಂಬ ವಿಷಯ ಮನಸ್ಸಿಗೆ ಬಂದಿತೆ ಹೊರತು, ನಾನು ತಿನ್ನಬೇಕೆಂಬ ಬಯಕೆ ಹುಟ್ಟಲಿಲ್ಲ. ಈ ಹಣ್ಣಿನ ಹಕ್ಕು ನಿಮಗೆ ಮಾತ್ರ ಇದೆ ಎಂದು ಹೇಳುತ್ತಾ ಹೊರಟು ಹೋದನು. ಗುರುಗಳ ಹಣ್ಣಿನ ಕುರಿತಾದ ಹೊಗಳಿಕೆ ಕಂಡು ಇತರ ಶಿಷ್ಯರು ಸಹ ಹಣ್ಣು ತಿನ್ನುವ ಮನಸ್ಸು ಮಾಡುತ್ತಾರೆ. ಗುರುಗಳೇ ನಿಮ್ಮಲ್ಲಿ ಬೇಕಾದಷ್ಟು ಹಣ್ಣುಗಳಿವೆ, ನಮಗೂ ಹಣ್ಣುಗಳನ್ನು ತಿನ್ನಲು ಕೊಡುವಿರಾ? ಎಂದು ಕೇಳಿದರು. ಗುರುಗಳು ಎಲ್ಲ ಶಿಷ್ಯರಿಗೂ ತಲಾ ಒಂದೊಂದು ಹಣ್ಣುಗಳನ್ನು ಕೊಟ್ಟರು. ಹಣ್ಣುಗಳನ್ನು ತಿಂದ ಶಿಷ್ಯರು, ಈ ಹಣ್ಣುಗಳನ್ನು ಹೇಗೆ ತಿನ್ನುತ್ತೀರಿ ?ಈ ಹಣ್ಣುಗಳು ತುಂಬ ಕಹಿ ಹಾಗೂ ಹುಳಿ ರುಚಿಯನ್ನು ಹೊಂದಿದೆ ಎಂದು ಶಿಷ್ಯನ ಮೇಲೆ ದೂರು ಹೇಳುತ್ತಾರೆ.ಆಗ ಗುರುಗಳು ನೀವು ಈ ಹಣ್ಣಿನ ರುಚಿಯನ್ನು ಮಾತ್ರ ಆಸ್ವಾದಿಸಿರುವಿರಿ. ಆದರೆ, ನಾನು ನನಗಾಗಿ ಹಣ್ಣುಗಳನ್ನು ತಂದ ಶಿಷ್ಯನ ಮನಸ್ಸನ್ನು ಮಾತ್ರ ಗಮನಿಸಿದೆ. ಈ ಹಣ್ಣಿನ ರುಚಿ ಕಹಿ ಅಥವಾ ಹುಳಿ ಎಂದು ಹೇಳಿದರೆ ಅವನ ಮನಸ್ಸಿಗೆ ನೋವಾಗುತ್ತದೆ. ಹಾಗಾಗಿ ನಾನು ಸತ್ಯ ಹೇಳಲಿಲ್ಲ ಎಂದರು. ಈ ಕಥೆಯ ತಾತ್ಪರ್ಯವೆನೆಂದರೆ ಜೀವನದಲ್ಲಿ ನಾವು ಸತ್ಯ ಹೇಳುವುದು ತುಂಬಾ ಮುಖ್ಯ. ಹಾಗೆಯೇ ಕೆಲವು ಬಾರಿ ಮತ್ತೊಬ್ಬರ ಮನಸ್ಸನ್ನು ನೋಯಿಸದಿರಲು ಸುಳ್ಳು ಹೇಳುವುದು ಅನಿವಾರ್ಯವಾಗುತ್ತದೆ. ಸಂಬಂಧಗಳನ್ನು ಉಳಿಸಿಕೊಳ್ಳಲು ಹಾಗೂ ಶಾಶ್ವತವಾಗಿ ಕಾಪಾಡಿಕೊಳ್ಳಲು ಸತ್ಯವನ್ನು ಮರೆಮಾಚಬೇಕಾಗುತ್ತದೆ. ಹಾಗೂ ಸುಳ್ಳನ್ನು ಆಶ್ರಯಿಸಬೇಕಾಗುತ್ತದೆ.

### 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com M: 9448633038

# ಗಟ್ಟಿ ಸಂಬಂಧ-ಅದುವೇ ಅನುಬಂಧ



ಸಂಬಂಧವೆನ್ನುವುದು ಯಾವ ಆಡಂಭರಗಳಿಲ್ಲದ ಸೂಕ್ಷ್ಮ ಸಂವೇದನೆಯಲ್ಲಿ ತಂಪನ್ನು ನೀಡುವ ನೀರಿನಂತಿರಬೇಕು. ಸಂಬಂಧ ಎಂದಾಕ್ಷಣ ಒಡಹುಟ್ಟಿದ, ಸಾಕಿ ಸಲಹಿದ, ಹಿರಿ-ಕಿರಿಯ ಬಳಗವೆಲ್ಲಾ ನಮ್ಮ ಕಣ್ಣಮುಂದೆ ಬರುತ್ತದೆ. ಇಲ್ಲಿ ಎಲ್ಲರೂ ನಮ್ಮವರೆ. ಕಷ್ಟ-ನಷ್ಟ-ಇಷ್ಟಗಳಿಗೆಲ್ಲಾ ಸ್ಪಂಧಿಸುವವರೆ. ಕೆಲವೊಂದು ಇತಿ-ಮಿತಿಗಳ ಚೌಕಟ್ಟಿನಲ್ಲಿರುವ ಸಂಬಂಧದ ಪ್ರೀತಿಯ ಎಳೆಯನ್ನು ಜಾಗುರೂಕತೆಯಿಂದ ನಾಜೂಕಾಗಿ ಎಳೆದಾಡಬೇಕು. ಭಾರೀ ಶಕ್ತಿ ಪ್ರದರ್ಶನದಿಂದ ಪ್ರೀತಿಯ ಎಳೆಯನ್ನು ಎಳೆದರೆ ಇದು ತುಂಡಾಗುತ್ತದೆ. ಯಾವುದೂ ಅತಿ-ಮತಿಯಾಗದೇ ಕಥೆಯಾಗಿ ಫಜೀತಿಗೊಳಗಾಗದೇ ತಾಳ್ಮೆ, ತ್ಯಾಗ, ಶಾಂತಿ, ಸಮಾಧಾನದಿಂದ ನಡೆದುಕೊಳ್ಳಬೇಕು.

ಕೆಲವೊಮ್ಮೆ ಸಂಬಂಧಗಳಲ್ಲಿ ಮನಸ್ತಾಪಗಳಾಗಬಹುದು. ಅಂದರೆ ಉಗುರು ಬೆಳೆದಾಗ ಅದನ್ನು ಕತ್ತರಿಸಿಕೊಳ್ಳುತ್ತೇವೆಯೋ ಹೊರತು ಬೆರಳನ್ನಲ್ಲ. ತಲೆಗೂದಲು ಬೆಳೆದಾಗ ಅದನ್ನು ಕತ್ತರಿಸಿಕೊಳ್ಳುತ್ತೇವೆಯೋ ಹೊರತು ತಲೆಯನ್ನಲ್ಲ. ಸಿಟ್ಟು ಬಂದಾಗ ಸಿಟ್ಟನ್ನು ನುಂಗಿಕೊಳ್ಳಬೇಕೇ ವಿನಃ ಸಂಬಂಧವನ್ನು ಕಳೆದುಕೊಳ್ಳಬಾರದು. ಜನಪದರು ಹೇಳುವಂತೆ "ನನ್ನದು. ನಾನು, ನನ್ನಿಂದ, ಎಂಬ ಅಹಂಕಾರದ ಮನೋಭಾವ ಸಂಬಂಧದಲ್ಲಿ ನಿಜಕ್ಕೂ ಸಲ್ಲದು. ನಾನು ಎಂಬುದು ಇಲ್ಲಿ ಕ್ಷಣಿಕ. ನೀನು ಎಂಬುದೇ ಇಲ್ಲಿ ಮಾರ್ಮಿಕ". ಸಂಬಂಧಗಳಲ್ಲಿ ಒಬ್ಬರಿಗೊಬ್ಬರು ಕಷ್ಟ-ನಷ್ಟ-ನೋವು ಹಂಚಿಕೊಳ್ಳುವುದು ಸಹಜ. ಇವೆಲ್ಲ ಈರುಳ್ಳಿಯ ಪದರಗಳಿದ್ದಂತೆ. ಪ್ರತಿ ಪದರ ಕೀಳುವಾಗಲೂ ಕಣ್ಣೀರು ಬರುತ್ತದೆಯಾದರೂ ಅವೆಲ್ಲ ಕ್ಷಣಿಕ.

ಆತ್ಮೀಯತೆ ಹೊಂದಿದ ಸಂಬಂಧಗಳಲ್ಲಿ ನೀವು ಒಂದು ಮಾತನ್ನು ಕಡಿಮೆ ಮಾತಾಡಿದರೆ ತಪ್ಪಿಲ್ಲ. ಆದರೆ ಒಂದು ಮಾತನ್ನು ಹೆಚ್ಚು ಮಾತಾಡಿದರೆ ಹೋಯಿತು. ಮಾತಾಡುವಾಗ ನಾಲಗೆಯ ಮೇಲೆ ಹಿಡಿತವಿದ್ದರೆ ಉತ್ತಮ ಮಾತುಗಾರನಾಗಬಹುದು. ಸಂಬಂಧಗಳಲ್ಲಿ ಸಹಾನುಭೂತಿ ಬಹಳ ಮುಖ್ಯ. ಯಾರೇ ಸುಖ-ದುಃಖದಲ್ಲಿದ್ದರೆ ಸಮಾಧಾನ ಹೇಳುವ ಪ್ರವೃತ್ತಿ ಮತ್ತು ಸಹಾಯದ ಹಸ್ತ ಚಾಚುವ ಸದ್ಗುಣ ಇರಬೇಕು. ಸಂಬಂಧಗಳಲ್ಲಿ ನಿಮ್ಮ ಹೃದಯದ ಕದ ತಟ್ಟಿದವರ ಭಾವನೆಗಳನ್ನು ಗೌರವಿಸಿರಿ. ಏಕೆಂದರೆ ಅವರು ಯಾವಾಗ ನಿಮ್ಮನ್ನು ಬಿಟ್ಟು ದೂರ ಹೋಗುತ್ತಾರೋ ಗೊತ್ತಿರುವುದಿಲ್ಲ.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಈಚೆಗೆ ಭಾರತದಲ್ಲಿ ಅವಿಭಕ್ತ ಕುಟುಂಬಗಳು ಕ್ರಮೇಣ ಮಾಯವಾಗುತ್ತಾ ವಿಭಕ್ತ ಕುಟುಂಬಗಳು ಹೆಚ್ಚಾಗತೊಡಗಿವೆ. ಅವಿಭಕ್ತ ಕುಟುಂಬದಲ್ಲಿ ಹಿರಿಯರಿಂದ ಕಿರಿಯರಿಗೆ ರಕ್ಷಣೆ ಹಾಗೂ ಮಾರ್ಗದರ್ಶನ ಸಿಗುತ್ತಿರುತ್ತದೆ. ಅಲ್ಲದೆ ಮಕ್ಕಳಿಗೆ ಬೇಕಾದ ಉತ್ತಮ ಸಂಸ್ಕೃತಿ, ಸಂಸ್ಕಾರ ಪ್ರಾಪ್ತವಾಗುತ್ತದೆ. ಕೂಡು ಕುಟುಂಬದಲ್ಲಿ ಸಂಬಂಧಗಳು ಗಟ್ಟಿಯಾಗಿರುವ ಅನುಭವ ಮಕ್ಕಳಲ್ಲಿ ಕಂಡುಬರುತ್ತದೆ. ಅವರಲ್ಲಿ ಕೀಳರಿಮೆ ದೂರವಾಗಿ ಹಿರಿಯರಲ್ಲಿ, ದೇವರಲ್ಲಿ ಭಕ್ತಿಭಾವ ಹೆಚ್ಚಾಗುತ್ತದೆ. ಪೂಜೆ, ಪ್ರಾರ್ಥನೆ, ಶಿಸ್ತು, ಸಂಯಮ, ಸಹಾಯ ಮುಂತಾದ ಸದ್ಗುಣಗಳು ಸಹಜವಾಗಿ ಮೂಡುತ್ತವೆ. ಇದರಿಂದ ಮಕ್ಕಳ ವ್ಯಕ್ತಿತ್ವವೂ ವಿಕಾಸಗುತ್ತದೆ. ಕುಟುಂಬದ ಸಕಲ ಸದಸ್ಯರು ಪರಸ್ಪರ ಪ್ರೀತಿಯ ಅನುಬಂಧದೊಂದಿಗೆ ನಗುವನ್ನು ಹಂಚಿಕೊಳ್ಳುತ್ತಾ ನೆಮ್ಮದಿಯಿಂದ ಬಾಳಬಹುದು.

ಸಣ್ಣ ಕುಟುಂಬಗಳಲ್ಲಿ ಇಂತಹ ಸೌಲಭ್ಯ ಕಡಿಮೆ. ಮಾನಸಿಕ ಹಾಗೂ ಸಾಮಾಜಿಕ ಒತ್ತಡಗಳು ಹೆಚ್ಚಾಗಿರುತ್ತವೆ. ಅವಿಭಕ್ತ ಕುಟುಂಬದಲ್ಲಿದ್ದಾಗ ಅಥವಾ ನಾಲ್ಕಾರು ಸ್ನೇಹಿತರೊಡನೆ ಒಳ್ಳೆಯ ಸಂಬಂಧವಿದ್ದಾಗ ಏನಾದರೂ ಪಾಲಿಗೆ ಬಂದ ಕೆಲಸವಿದ್ದರೆ ಬೇರೆಯವರು ಮಾಡಬಹುದೆಂದು ಯೋಚಿಸುವುದು ಒಳ್ಳೆಯದಲ್ಲ. ಎಷ್ಟೋ ಸಲ ಬಹಳ ದಿನದ ನಂತರ ಆ ಕೆಲಸವನ್ನು ನಾವೇ ಮಾಡಬೇಕಾಗುತ್ತದೆ. ಆದ್ದರಿಂದ ನಮಗಾಗಿ ಕಾದಿರುವ ಕೆಲಸಕ್ಕೆ ಕುಂಟು ನೆಪ ಹೇಳದೇ ನಾವೇ ಆದಷ್ಟು ಬೇಗ ಮಾಡಿ ಮುಗಿಸಿ ಸ್ನೇಹ-ಸಂಬಂಧವನ್ನುಜಾಗೂರುಕತೆಯಿಂದಕಾಪಾಡಿಕೊಳ್ಳಬೇಕು.

ಈಚೆಗೆ ಆಧುನಿಕ ಶಿಕ್ಷಣ ಪಡೆದಂತೆ ವಸ್ತು ವಿಷಯದ ಆಯ್ಕೆಯಲ್ಲಿ ಆಕರ್ಷಣೆ, ಭಿನ್ನತೆಗಳು ಹೆಚ್ಚಾಗಿ ಸಂಬಂಧದಲ್ಲಿ ಸೂಕ್ಷ್ಮವಾದ ಬಿರುಕುಗಳು ಆರಂಭವಾಗಿವೆ. ಇಂದಿನ ಶಿಕ್ಷಣ ಯೋಗಕಿಂತ ಭೋಗ ಜೀವನಕ್ಕೆ ಅಡಿಪಾಯವಾಗಿದೆ. ಕೇವಲ ಧನ ಸಂಪತ್ತನ್ನು ಸಂಪಾದಿಸುವುದೇ ಇದರ ಗುರಿಯಾಗಿದೆ. ಆದರೂ ತಂದೆ-ತಾಯಿಗಳು ತಮ್ಮ ಮಕ್ಕಳ ಸಂಬಂಧದ ವಿಚಾರದಲ್ಲಿ ಅವರ ಅಭಿರುಚಿಗಳನ್ನು ಗಮನಿಸಬೇಕು. ಮನೆಯಲ್ಲಿ ಪ್ರೀತಿ, ವಿಶ್ವಾಸದ ವಾತಾವರಣ ನಿರ್ಮಿಸಿ ಅವರಿಗೆ ಸಾಕಷ್ಟು ಪ್ರೋತ್ಸಾಹ ನೀಡಬೇಕು. ಆಗ ಅವರಲ್ಲಿ ಹುದುಗಿರುವ ಸುಪ್ತ ಪ್ರತಿಭೆ ಅರಳಲು ಸಾಧ್ಯ. ಅದೇರೀತಿ ವಯಸ್ಸಾದ ತಂದೆ-ತಾಯಿಗಳನ್ನು ಅಂತ್ಯ ಕಾಲದಲ್ಲಿ ಅಕ್ಕರೆಯಿಂದ ಸೇವೆ ಮಾಡಿದರೆ ಕೊನೆಗಾಲದಲ್ಲಿ ಅವರೊಡನೆ ಇಟ್ಟುಕೊಂಡ ಸಂಬಂಧ ಗಟ್ಟಿಗೊಳ್ಳುತ್ತದೆ. ಆಗ ಅವರ ಮನಸ್ಸಿಗೂ ಸಮಾಧಾನವಾಗುತ್ತದೆ.

ಇಂದು ಕೇವಲ ತನ್ನ ಪತಿ ಪತ್ನಿ ಹಾಗೂ ಮಕ್ಕಳೊಂದಿಗೆ ಮಾತ್ರ ಸುಖ ಜೀವನ ನಡೆಸುವ ಪ್ರಕ್ರಿಯೆ ಮುಖ್ಯವೆಂದೇ ಭಾವಿಸಿದಾಗ ಹೆತ್ತು ಸಾಕಿ ಸಲಹಿದವರೆಲ್ಲಾ ದೂರವಾಗತೊಡಗಿದ್ದಾರೆ. ಹಾಗೆಯೇ ಮಕ್ಕಳನ್ನು ವಸತಿ ಶಾಲೆಗಳಿಗೆ, ವೃದ್ಧರನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಪಾಶ್ಚಾತ್ಯ ಸಂಸ್ಕೃತಿ ನಮ್ಮಲ್ಲಿ ಹೆಚ್ಚಾಗಿದೆ. ಇದರಿಂದ ನಮ್ಮಲ್ಲಿ ರಕ್ತ ಸಂಬಂಧಗಳು ದೂರವಾಗ ತೊಡಗಿವೆ. ಒಟ್ಟಾರೆ ಈಗಿರುವ ಸಂಬಂಧಗಳನ್ನಾದರೂ ಅತ್ಯಂತ ಪ್ರೀತಿಯಿಂದ ಕಾಪಾಡಿಕೊಳ್ಳೋಣ. ಉತ್ತಮ ಸಮಾಜಕ್ಕೆ ಮಾನವೀಯ ಸಂಬಂಧಗಳೇ ಅಡಿಪಾಯವೆಂದು ಭಾವಿಸಿಕೊಳ್ಳೋಣ.

# ಡಾಕ್ಟರ್ ಕಣ್ಣಾಲಿಗಳು ತುಂಬಿ ಬಂದವು...

ಆತನಿಗೆ ಬಗೆಹರಿಯದ ದಮ್ಮು ಕೆಮ್ಮು ವ್ಯಾಧಿ..ನಿರಂತರವಾಗಿ ಕೆಮ್ಮು.. ಆ ವ್ಯಾಧಿಯೂ ಸಹ ಕರುಣಾಮಯಿ.. ತನಗೆ ವಿಶ್ರಾಂತಿ ಬೇಕೆನ್ನಿಸಿದಾಗ ಸ್ವಲ್ಪ ಹೊತ್ತು ಕಳ್ಳಾಟ ಆಡಿ ಸುಮ್ಮನಿದ್ದು ಬಿಡುತ್ತದೆ..

ಬೇಕಾದಷ್ಟು ಹಣವಿದೆ..ನೂರಾರು ಎಕರೆ ನೀರಾವರಿ ಭೂಮಿ.. ಊರಲ್ಲಿ ರಾಜಮರ್ಯಾದೆ..ಆದರೆ ಹಾಳಾದ ದಮ್ಮು ಕೆಮ್ಮು.. ಎಲ್ಲಾ ಕಡೆ ತೋರಿಸಿದ್ದಾಯ್ತು..ತೋರಿಸಿಕೊಂಡು ಔಷಧೋಪಚಾರ ಮಾಡಿದಾಗ ಸ್ವಲ್ಪ ವಾಸಿಯಾದಂತೆ ಮಾಡಿ ಮತ್ತೆ ದಮ್ಮು ಮರುಕಳಿಸುತ್ತದೆ..ಆಕಾಶದಲ್ಲಿ ಮೋಡಗಳು ಅಡ್ಡಾಡಲು ಪ್ರಾರಂಭಿಸಿದವು ಎಂದರೆ ದಮ್ಮು ರೋಗಿ ಸತ್ತಂತೆಯೇ ಸರಿ.. ಮೋಡ ಕವಿದಾಗ ದಮ್ಮು ಜಾಗೃತಗೊಳ್ಳುತ್ತದೆ.. ಮಗ ಕಾಂತೇಶ ಇದ್ದಕ್ಕಿದ್ದಂತೆ ಬಂದು ತಂದೆಯನ್ನು ಬೆಂಗಳೂರಿನ ಪ್ರತಿಷ್ಠಿತ ಆಸ್ಪತ್ರೆಯೊಂದಕ್ಕೆ ಕರೆದೊಯ್ದು..ಅಲ್ಲಿ ಪರೀಕ್ಷೆಗಳೆಲ್ಲಾ ಮುಗಿದವು... ಜೂನಿಯರ್ ಡಾಕ್ಟರ್ ಗಳು ತಮ್ಮ ಹಿರಿಯ ವೈದ್ಯರು ಬರಲಿ ಅವರು ರಿಪೋರ್ಟ್ ನೋಡಿ ಔಷಧಿ ಬರೆಯುತ್ತಾರೆಂದು ತಂದೆ ಮಗನನ್ನು ಕುಳ್ಳಿರಿಸಿದರು... ಸ್ವಲ್ಪ ಹೊತ್ತಿನ ನಂತರ ವೈದ್ಯರ ಆಗಮನವಾಯ್ತು.. ಇಬ್ಬರೂ ಎದ್ದು ನಿಂತರು..



ಮಹಿಮ
ಲೇಖಕರು, ರಾಯಚೂರು

Scan For Digital Colourful
HAMPI TIMES E-paper

ಡಾಕ್ಟರ್ ಒಳಗೆ ಹೋದರು..ಸ್ವಲ್ಪ ಹೊತ್ತಿನ ನಂತರ ಜೂನಿಯರ್ ಡಾಕ್ಟರ್ ಒಬ್ಬರು ಇವರಿಬ್ಬರಿಗೂ ಡಾಕ್ಟರ್ ಬಳಿ ಹೋಗುವಂತೆ ಸೂಚಿಸಿದರು..

ಡಾಕ್ಟರ್ ಮತ್ತೆ ಪರೀಕ್ಷಿಸಿ.. ರೋಗಿಗೆ ವ್ಯಾಧಿಯ ಆಳ ಅಗಲದ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾ ಹೋದರು.. ಹದಿನೈದು ದಿನಗಳ ಔಷಧಿ ಬರೆದುಕೊಟ್ಟರು...

ಅವುಗಳನ್ನು ಖರೀದಿಸುವುದು ಬೇಕಿಲ್ಲ..ಹೊರಗೆ ನಮ್ಮ ಡಾಕ್ಟರ್ ಒಬ್ಬರು ಇರುತ್ತಾರೆ ಅವರಿಗೆ ಚೀಟಿ ತೋರಿಸಿ ಅವರು ಔಷಧಿ ಕೊಡ್ತಾರೆ ಅಂದರು...

"ಈ ಔಷಧಿಯ ಹಣ ಕೊಡ್ತೀನಿ ಡಾಕ್ಟರ್" ಮಗ ಕಾಂತೇಶ ಹೇಳಿದ.. "ನೋ,ನೀವು ಕೊಡಬಹುದು ನಾನು ತೆಗೆದುಕೊಳ್ಳಲ್ಲ" "ಯಾಕೆ ಡಾಕ್ಟರ್" ಕಾಂತೇಶ ಕೇಳಿದ "ನೀವು ನಮ್ಮೂರಿನವರು" ಡಾಕ್ಟರ್ ಮುಗುಳ್ನಕ್ಕರು.. "ನೀವು ನಮ್ಮೂರಿನವರಾ" ಕಾಂತೇಶನ ಅಪ್ಪ ಗಾಬರಿಯಿಂದ ಕೇಳಿದರು..

"ಹೌದು ಯಜಮಾನರೇ,ನಿಮ್ಮ ಮನೆಯಲ್ಲಿ ಕೆಲಸಕ್ಕೆ ಇದ್ದರಲ್ಲ ರಾಚಪ್ಪ ಅವರ ಮಗ ನಾನು ವಿಷ್ಣು" "ಏನೂ ನೀನು ನಮ್ಮ ರಾಚಪ್ಪನ ಮಗನೇ..ಬಹಳ ಸಂತೋಷ ಆಯ್ತಪ್ಪಾ..ನೀನು ಡಾಕ್ಟರ್ ಆದದ್ದು ನನಗೆ ಗೊತ್ತೇ ಇರಲಿಲ್ಲಪ್ಪ" ಕಾಂತೇಶನ ತಂದೆ ಗೋಪಣ್ಣ ಆಶ್ಚರ್ಯ ದಿಂದ ನುಡಿದ...

"ನೀವು ಮರೆಯಬಹುದು ನಾನು ಮರೆತಿಲ್ಲ ಯಜಮಾನರೇ, ಇದ್ದಕ್ಕಿದ್ದಂತೆ ನೀವು ನಮ್ಮಪ್ಪ ನನ್ನು ಕೆಲಸದಿಂದ ತೆಗೆದುಬಿಟ್ಟಿರಿ..ನಾವು ದಾರಿ ಕಾಣದೇ ಊರು ಬಿಟ್ಟೆವು..ಅಪ್ಪ ಬೆಂಗಳೂರಿನ ಅಪಾರ್ಟ್ಮೆಂಟ್ ಗಳಲ್ಲಿ ವಾಚ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದರು...ಈಗ ಅವರಿಲ್ಲ..ಹೋಗಿ ಬಿಟ್ಟರು.. ಅಪ್ಪ ವಾಚ್ ಮ್ಯಾನ್ ಆಗಿದ್ದ ಅಪಾರ್ಟ್ಮೆಂಟ್ ಮಾಲೀಕರು ನನ್ನನ್ನು ಕೈ ಬಿಡದೇ ಓದಿಸಿದರು...ಅವರೇ ನನ್ನ ಅನ್ನದಾತ..ವಿದ್ಯಾದಾತ"

ಗೋಪಣ್ಣ ಡಾಕ್ಟರ್ ಮಾತುಗಳನ್ನು ಕೇಳಿ ನಿಟ್ಟುಸಿರುಬಿಟ್ಟ.. "ನಿಮ್ಮ ತಂದೆ ಹೋಗಿಬಿಟ್ರಾ..ನಾನು ಅವರನ್ನು ಕೆಲಸದಿಂದ ತೆಗೆಯಬಾರದಿತ್ತು"

"ಇರಲಿ ಯಜಮಾನರೇ,ನೀವು ತೆಗೆದಿದ್ದಕ್ಕೆ ನಾವಿಲ್ಲಿಗೆ ಬಂದೆವು.. ನಾನು ಡಾಕ್ಟರ್ ಆದೆ..ಅಪ್ಪನ ತ್ಯಾಗ ದೊಡ್ಡದು ಯಜಮಾನ್ರೇ" "ನನ್ನ ಋಣ ನಿನ್ನ ಮೇಲೆ ಸ್ವಲ್ಪವಾದರೂ ಇಲ್ಲದಂತಾಯ್ತಲ್ಲ" ಗೋಪಣ್ಣ ಮರುಗಿದ..

"ಖಂಡಿತವಾಗಿ ಇದೆ ಯಜಮಾನರೇ,ಯಾರೂ ಅನ್ನ ನೀಡದಿದ್ದಾಗ ನೀವು ನಮಗೆ ಅನ್ನ ನೀಡಿದ್ದೀರಿ..ನಿಮ್ಮ ಮನೆಯ ತಂಗಳನ್ನ ನಮಗೆ ಪರಮಾನ್ನವಾಗಿತ್ತು" ಡಾಕ್ಟರ್ ಕಣ್ಣಾಲಿಗಳು ತುಂಬಿ ಬಂದವು...



ಗೋಪಣ್ಣ ಡಾಕ್ಟರ್ ಬಳಿಸಾರಿ ಆತನನ್ನು ಬಿಗಿದಪ್ಪಿದ "ಸಣ್ಣ ಮನಸಿದ್ದವನು ಎಷ್ಟು ದೊಡ್ಡವನಾದರೇನು ಅವನು ತೀರಾ ಸಣ್ಣವನು ವಿಷ್ಣು..ನಿಮ್ಮದು ದೊಡ್ಡತನ..ದೇವರು ನಿಮ್ಮನ್ನು ದೊಡ್ಡ ವೈದ್ಯನನ್ನಾಗಿ ಮಾಡಿದ..ಸಣ್ಣತನ ಇರುವ ನನ್ನನ್ನು ರೋಗಿಯನ್ನಾಗಿ ಮಾಡಿದ..ನನ್ನಿಂದ ನಿಮಗೆ ನೋವಾಗಿದೆ ದಯವಿಟ್ಟು ಕ್ಷಮಿಸಿ" ಗೋಪಣ್ಣ ಡಾಕ್ಟರ್ ಗೆ ಕೈ ಮುಗಿದ...

ಥಗೋಪಣ್ಣನಿಗೆ ತಾನು ಬಹಳ ಸಣ್ಣವನಾಗಿಬಿಟ್ಟೆ ಅನ್ನಿಸಿತು,ಗೋಪಣ್ಣ ಮತ್ತೊಮ್ಮೆ ಡಾಕ್ಟರ್ ನ ನ್ನು ಬಿಗಿಯಾಗಿ ತಬ್ಬಿಕೊಂಡ..

ಕವಿ ಮನಸು

## ಅಮ್ಮ ನಿನ್ನ ಮಡಿಲಿನಲ್ಲಿ



ಅಮ್ಮ ನಿನ್ನ ಮಡಿಲಿನಲ್ಲಿ
ಎಂಥ ಸುಖವಿದೆ
ಮಳೆಯು ನೀರು ಎನ್ನ ಕೆಳಗೆ
ಹರಿದರೂ ಹಿತವಿದೆ

ಅಮ್ಮನಾಗಿ ನಿನ್ನ ಪಡೆದ
ಪುಣ್ಯ ನನಗಿದೆ
ಬಾಲನಾಗಿ ಹೀಗೆ ಇರಲು
ಮನವು ಆಗಿದೆ

ಅಮ್ಮ ನನ್ನ ದೊಡ್ಡವನನ್ನ
ಮಾಡಬೇಡವೇ
ಮಗುವಾಗಿ ನಿನ್ನ ಮಡಿಲಿನಲ್ಲಿ
ಹೀಗೆ ಮಲಗಿಬಿಡುವೆ

ನೀ ಮಾಡಿದ ತ್ಯಾಗವನ್ನು ನಾ
ಹೇಗೆ ಮರೆಯಲಿ
ತೀರಿಸಲಾಗದಮ್ಮ ನಿನ್ನ ಋಣ
ಈ ಜನ್ಮದಲಿ

ಯಾವ ವಿಷ ಜಂತು ಎನ್ನ
ಬಳಿಗೆ ಬಾರದು
ನಿನ್ನ ಕರದ ಕೃಪಾ ಕಟಾಕ್ಷವು
ಅಷ್ಟು ದೊಡ್ಡದು

ಸಣ್ಣ ಮಾಗುವಾಗಿ ಇರಲು ಎನಗೆ
ಈ ಲೋಕ ಬಿಡದು
ಸೃಷ್ಟಿ ನಿಯಮ ಎನ್ನ ಎತ್ತರಕ್ಕೆ
ಬೆಳೆಸಿಬಿಡುವುದು

ಬೆಳೆದಂತೆ ಬರುವುದೇಕೆ ನನ್ನ
ನಿನ್ನ ನಡುವೆ ಅಂತರ
ನಾನೋ,ಇಲ್ಲ ನೀನೋ ಹುಡುಕಿ
ತಂದ ಮಡದಿ ಮಧ್ಯಂತರ

ನಾಡಿಗೆ ನಾ ಪ್ರಭುವಾದರೇನು
ನಿನಗೆ ಮಗುವಾಗಿರುವೆನು
ಎದೆ ಹಾಲಿನಲ್ಲಿ ಕೊಟ್ಟೆ ಸಂಸ್ಕಾರ
ಮಾಡಿದೆನ್ನ ಭಾರತೀಯ ಕುವರ

– **ಕೆ ಎಂ ಬಸವರಾಜ** ಹೊಸಪೇಟೆ

## ಮನಸಿದ್ದರೆ ಮಾರ್ಗ

ಛಲವೊಂದಿದ್ದರೆ ಎಲ್ಲವೂ ಸಾಧ್ಯ
ಯಾವುದು ಇಲ್ಲ ಅಸಾಧ್ಯ
ಸಾಧನೆಗೆ ಕಠಿಣ ಪರಿಶ್ರಮವಿರಬೇಕು
ಆತ್ಮವಿಶ್ವಾಸದೊಂದಿಗೆ ದೃಢಸಂಕಲ್ಪ
ತೊಡಬೇಕು

ಕಿತ್ತು ತಿನ್ನುವ ಬಡತನವಿದ್ದರೂ
ಅವಮಾನದ ಸುಳಿಯಲಿ ಸಿಲುಕಿದರು
ಸನ್ಮಾನಗಳು ಬರುವಂತೆ ಸಾಧಿಸು
ಜ್ಞಾನದ ಬೆಳಕನ್ನು ಬೆಳಗಿಸು

ಮನಸ್ಸಿದ್ದರೆ ಮಾರ್ಗ ಮನುಜ
ಜೀವನವು ಏಳಿಗೆಯ ಕಣಜ
ಬದುಕಲಿ ಏಳುಬೀಳು ಸಹಜ
ಮನಶಕ್ತಿ ಅಗಾಧವೆಂಬುದು ನಿಜ

– **ಚೇತನ ಭಾರ್ಗವ**


**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.


ರಂಗ ಪಂಚಮಿ

# ಬಣ್ಣಗಳ ಹಬ್ಬ.... ಹೋಳಿ

ಒಂದು ಕ್ಷಣ ಕಣ್ಣು ಮುಚ್ಚಿಕೊಂಡು ಈ ಜಗತ್ತನ್ನು ಕಲ್ಪನೆ ಮಾಡಿಕೊಳ್ಳಿ ಎಲ್ಲವೂ ಕೇವಲ ಬಿಳಿ ಇಲ್ಲವೇ ಕೇವಲ ಕಪ್ಪು ಬಣ್ಣವನ್ನು ಹೊಂದಿದ್ದರೆ ಹೇಗಿರುತ್ತದೆ ಎಂದು???. ಬೆಳ್ಳನೆಯ ಮೋಡ, ಬೆಳ್ಳನೆಯ ವಿಶಾಲ ಸಮುದ್ರ, ಬೆಳ್ಳನೆಯ ಗಿಡ ಮರಗಳು, ಬೆಳ್ಳನೆಯ ರಸ್ತೆಗಳು, ಬೆಳ್ಳನೆಯ ದೇಹದ ಆಕೃತಿಗಳು ಅಬ್ಬಬ್ಬಾ ಯಾವುದೂ ಚೆನ್ನಾಗಿರುವುದಿಲ್ಲ. ಅಷ್ಟರಲ್ಲಿಯೇ ಕಪ್ಪು ಮತ್ತು ಬಿಳಿ ಎರಡು ಬಣ್ಣಗಳನ್ನು ಕೂಡಿಸಿದ ಬಣ್ಣ ತುಸು ಹೆಚ್ಚೇ ಮನಮೋಹಕ ಎನಿಸುತ್ತದೆ.

ಆದರೆ ಹಲವಾರು ಬಣ್ಣಗಳನ್ನು ಹೊಂದಿರುವ ಈ ಪ್ರಕೃತಿ ಅತ್ಯಂತ ಸುಂದರ, ನಯನ ಮನೋಹರವಾಗಿರುತ್ತದೆ. ಬಣ್ಣವಿಲ್ಲದ ಬದುಕು ಬರಡು ಎನಿಸುತ್ತದೆ. ಆಕಾಶದಲ್ಲಿ ತಿಳಿ ನೀಲಿ ಮೋಡಗಳು ಮತ್ತು ಕಪ್ಪು ಮೋಡಗಳು, ಹಸಿರು ಹಾಸಿದ ಗಿಡಮರಗಳು, ಆಕಾಶದ ನೀಲಿಯನ್ನೇ ಹೊದ್ದ ತಿಳಿ ನೀಲ ಸಾಗರ, ಕಪ್ಪನೆಯ ಟಾರು ರಸ್ತೆಗಳು, ಬೆಳ್ಳನೆಯ ಬೆಳ್ಳಕ್ಕಿಗಳು, ವಿಧವಿಧ ಬಣ್ಣದ ಪಕ್ಷಿಗಳು, ಪ್ರಾಣಿಗಳು ಹೀಗೆ ಬಣ್ಣಮಯ ಲೋಕ ನಮ್ಮದು. ಈ ಬಣ್ಣ ಬಣ್ಣದ ಲೋಕವನ್ನು ಬಣ್ಣಿಸಲು ಪದಗಳು ಸಾಲದಾಗುತ್ತವೆ ಎಂದರೆ ಅದು ಅತಿಶಯೋಕ್ತಿಯೇನಲ್ಲ!!

ಬಣ್ಣಗಳು ಕೂಡ ನಮ್ಮ ಮನಸ್ಸಿನ ಭಾವಗಳನ್ನು ಸೂಚಿಸುತ್ತವೆ. ನಮ್ಮ ಮನಸ್ಸು ಅತ್ಯಂತ ಉದಾಸ ಸ್ಥಿತಿಯಲ್ಲಿದ್ದಾಗ ಊದಾ ಬಣ್ಣದ ಗೋಡೆಗಳು ಇಷ್ಟವಾದರೆ ತಿಳಿ ನೀಲಿ ಮತ್ತು ತಿಳಿ ಹಸಿರು ಬಣ್ಣ ಕಣ್ಣಿಗೆ ಮತ್ತು ಮನಸ್ಸಿಗೆ ಹಿತವನ್ನು ನೀಡುತ್ತವೆ. ಕೆಂಪು ಗುಲಾಬಿಯ ಬಣ್ಣ ಪ್ರೀತಿಯ ದ್ಯೋತಕವಾದರೆ ಬಿಳಿ ಶಾಂತಿಯ ಸೂಚಕ. ಹಳದಿ ಬಣ್ಣ ಸ್ನೇಹವನ್ನು ಸೂಚಿಸಿದರೆ ಹಸಿರು ಸಮೃದ್ಧಿಯ ಸಂಕೇತ. ಹಲವಿಧದ ಬಣ್ಣಗಳನ್ನು ತನ್ನ ಗರಿಗಳಲ್ಲಿ ಅಡಗಿಸಿಕೊಂಡಿರುವ ನವಿಲು ನಮ್ಮ ರಾಷ್ಟ್ರ ಪಕ್ಷಿ. ಬಣ್ಣಗಳು ಭಾವನೆಗಳನ್ನು ಅರಳಿಸುತ್ತವೆ.... ಅಂತೆಯೇ ಬಣ್ಣದ ಹಬ್ಬವು ಕೂಡ. ಕೆಲ ಹಬ್ಬಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳು ಪ್ರಮುಖ ಪಾತ್ರವನ್ನು ವಹಿಸಿದರೆ ಮತ್ತೆ ಕೆಲ ಹಬ್ಬಗಳಲ್ಲಿ ನಮ್ಮಲ್ಲಿ ಅಡಗಿ ಕುಳಿತಿರುವ ತುಂಟತನ, ಪೋಲಿತನಗಳನ್ನು ಹೊರ ಹಾಕುವ ಹಬ್ಬವಾಗಿರುತ್ತದೆ.

ಪ್ರತಿ ವರ್ಷ ಹೋಳಿ ಹುಣ್ಣಿಮೆಯ ಆಸುಪಾಸಿನಲ್ಲಿ ಜರುಗುವ ಈ ಬಣ್ಣದ ಹಬ್ಬ ನಮ್ಮ ಬದುಕಿಗೆ ನವ ಚೈತನ್ಯವನ್ನು ತರುತ್ತದೆ ಎಂದರೇ ಅಚ್ಚರಿಯೇನಲ್ಲ. ಪೌರಾಣಿಕ ಐತಿಹ್ಯಗಳ ಪ್ರಕಾರ ಶಿವನ ಪತ್ನಿಯಾದ ಸತಿ ದೇವಿಯು ತನ್ನ ತಂದೆ ದಕ್ಷ ರಾಜನು ನಡೆಸುತ್ತಿದ್ದ ಯಜ್ಞಕ್ಕೆ ಆಹ್ವಾನವಿಲ್ಲದೆ ಹೋಗುವುದು ಬೇಡ ಎಂಬ ಗಂಡನ ಆಣತಿಯನ್ನು ಮೀರಿ ತವರು ಮನೆಯ ಕಾರ್ಯಕ್ರಮವೆಂದು ಹೋಗಿ ಅಲ್ಲಿ ತನ್ನ ತಂದೆಯಿಂದಲೇ ಅವಮಾನಿತಳಾಗಿ ಯಜ್ಞ ಕುಂಡದಲ್ಲಿ ಹಾರಿ ಪ್ರಾಣ ಬಿಡುತ್ತಾಳೆ. ಪತ್ನಿಯನ್ನು ಕಳೆದುಕೊಂಡ ಮಹಾದೇವ ರೌದ್ರಾವೇಶದಿಂದ ಆಕೆಯ ದೇಹವನ್ನು ಹೊತ್ತು ತಿರುಗುತ್ತಿದ್ದಾಗ ಆತನ ಆವೇಶಕ್ಕೆ ಇಡೀ ಪ್ರಪಂಚ ನಡುಗುತ್ತಿತ್ತು. ಶಿವನ ಕೋಪವು ವೈಪರೀತ್ಯಕ್ಕೆ ತಿರುಗಬಾರದು ಎಂಬ ಕಾರಣದಿಂದ ಮಹಾವಿಷ್ಣು ತನ್ನ ಸುದರ್ಶನ ಚಕ್ರವನ್ನು ಬಳಸಿ ಸತಿ ದೇವಿಯ ದೇಹವನ್ನು ಛಿದ್ರಗೊಳಿಸಿದನು.

ಈಗಾಗಲೇ ಸುಟ್ಟು ಹೋದ ಆಕೆಯ ದೇಹದ ಭಾಗಗಳು ಅಖಂಡ ಭಾರತದ 54 ಸ್ಥಳಗಳಲ್ಲಿ ಬೀಳಲ್ಪಟ್ಟು 54 ಶಕ್ತಿ ಪೀಠಗಳು ಆವಿರ್ಭವಿಸಿದವು. ಮಹಾವಿಷ್ಣು ಶಿವನನ್ನು ಶಾಂತಗೊಳಿಸಿದ ನಂತರ ಇವನು ಉಗ್ರ ತಪಸ್ಸನ್ನು ಆಚರಿಸಲು ಹೊರಟು ಹೋದನು. ಅದಕ್ಕೂ ಮುನ್ನ ತಾರಕಾಸುರನು ಭೋಲಾಶಂಕರನ ಏಳು ದಿನದ ಮಗುವಿನಿಂದ ಮಾತ್ರ ತನಗೆ ಮರಣ ಬರಲಿ ಎಂದು ಬ್ರಹ್ಮದೇವನಿಂದ ವರ ಪಡೆದಿದ್ದನು. ಭಕ್ತ ಪ್ರಿಯ ಬ್ರಹ್ಮನು ತಥಾಸ್ತು ಎಂದು ಹೇಳಿಯೂ ಆಗಿತ್ತು. ನಂತರ ತಾರಕಾಸುರನ ಕೋಟಲೆಗಳು ಒಂದಲ್ಲ ಎರಡಲ್ಲ ಇಡೀ ಪೃಥ್ವಿಯ ಜನರನ್ನು ಆತ ಅತ್ಯಂತ ಕ್ರೂರವಾಗಿ ಕಾಡಲಾರಂಭಿಸಿದನು. ದೇವತೆಗಳಿಗೂ ಆತನ ಕಾಟದ ಬಿಸಿ ತಗುಲಿದಾಗ ಅವರೆಲ್ಲರೂ ಸೇರಿ ಬ್ರಹ್ಮ ಮತ್ತು ವಿಷ್ಣುವನ್ನು ಭೇಟಿಯಾಗಿ ತಮ್ಮ ಸಂಕಷ್ಟವನ್ನು ಹೇಳಿಕೊಂಡರು.ಇದೀಗ ಬ್ರಹ್ಮ ವಿಷ್ಣು ಮತ್ತು ದೇವತೆಗಳು ಸೇರಿ ಭೋಗ ತಪಸ್ಸಿನಲ್ಲಿ ನಿರತನಾದ ಶಿವನ ವಿವಾಹವನ್ನು ಹಿಮವಂತ ಮತ್ತು ಮೇನಾ ದೇವಿಯರ ಪುತ್ರಿ ಗಿರಿಜಾದೇವಿಯೊಂದಿಗೆ ಮಾಡುವ ಆಶಯಕ್ಕೆ ಬೆಂಬಲವಾಗಿ ಶಿವನನ್ನು ಎಚ್ಚರಿಸುವ ಮಹಾ ಕಾರ್ಯಕ್ಕೆ ಕಾಮದ ಅಧಿದೇವತೆಯಾದ ಮನ್ಮಥನಿಗೆ ಒಪ್ಪಿಸಿದರು. ಶಿವನನ್ನು ಎಚ್ಚರಗೊಳಿಸುವ ಈ ಮಹಾಮಣಿಹದಲ್ಲಿ ತನ್ನ ಪ್ರಾಣ ಹೋಗುವದೆಂಬ ಅರಿವಿದ್ದರೂ ಕೂಡ ಲೋಕ ಕಲ್ಯಾಣಕ್ಕಾಗಿ ಈ ಕಾರ್ಯವನ್ನು ಒಪ್ಪಿಕೊಂಡ ಕಾಮದೇವನು ತನ್ನ ಪತ್ನಿ ರತಿದೇವಿಯೊಂದಿಗೆ ಶಿವನು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದು ಅಲ್ಲೊಂದು ಸುಂದರ ಲೋಕವನ್ನು ಸೃಷ್ಟಿಸಿ ಪತ್ನಿಯೊಂದಿಗೆ ಮೋಹಕವಾಗಿ ನೃತ್ಯ ಮಾಡಿ ಶಿವನ ಮನಸ್ಸನ್ನು ತಣಿಸಲು ಪ್ರಯತ್ನಿಸಿದನು. ಕಾಮದೇವ ಮತ್ತು ರತಿದೇವಿಯರ ಸಾಕಷ್ಟು ಪ್ರಯತ್ನದ ನಂತರ ಕೂಡ ಶಿವ ಎಚ್ಚರಗೊಳ್ಳದೆ ಹೋದಾಗ ಅಂತಿಮ ಪ್ರಯತ್ನವಾಗಿ ಕಾಮದೇವನು ಪುಷ್ಪ ಬಾಣವನ್ನು ಶಿವನೆಡೆಗೆ ಬಿಟ್ಟನು. ಪುಷ್ಪಬಾಣ ಸೋಕಿದ ಶಿವನು ಎಚ್ಚರಗೊಂಡು ತನ್ನ ತಪಸ್ಸನ್ನು ಕೆಡಿಸಲು ಯತ್ನಿಸಿದ ಕಾಮದೇವನನ್ನು



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper



ತನ್ನ ಮೂರನೇ ಕಣ್ಣ ತೆರೆದು ಸುಟ್ಟುಬಿಟ್ಟನು. ಆಗ ಅಲ್ಲಿಯೇ ಇದ್ದ ರತಿ ದೇವಿಯು ಲೋಕ ಕಲ್ಯಾಣಕ್ಕಾಗಿ ದೇವತೆಗಳ ಆಗ್ರಹದ ಮೇರೆಗೆ ತನ್ನ ಪತಿ ಈ ಕಾರ್ಯಕ್ಕೆ ಎಳಸಿದನೆಂದು ತನಗೆ ಪತಿ ಭಿಕ್ಷೆ ನೀಡಬೇಕೆಂದು ಶಿವನನ್ನು ಕೇಳಿಕೊಂಡಳು. ಆಗ ಶಿವನು ಕಾಮದೇವನು ಆಕೆಯ ಕಣ್ಣಿಗೆ ಮಾತ್ರ ಕಾಣುವಂತೆ ವರ ನೀಡಿ ಇಡೀ ಲೋಕದ ಪಾಲಿಗೆ ಮನ್ಮಥನು ಅನಂಗನಾಗಿ ಇರುವಂತೆ ವರ ನೀಡಿದನು. ಈ ಅನಂಗ ವ್ಯಕ್ತಿತ್ವವೇ ನಮ್ಮ ನಿಮ್ಮೊಳಗಿರುವ ಕಾಮ. ಕಾಮ ಎಂದರೆ ಕೇವಲ ದೈಹಿಕ ಲಾಲಸೆಯಲ್ಲ ಅದು ನಮ್ಮನಿಮ್ಮೊಳಗೆ ಅಡಗಿರುವ ಆಸೆಯ ಮೂರ್ತ ರೂಪ. ಅರಿಷಡ್ವರ್ಗಗಳಲ್ಲಿ ಒಂದಾಗಿರುವ ಈ ಕಾಮ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರುತ್ತದೆ. ಅಂತಹ ಕಾಮದ ಕೆಟ್ಟತನವನ್ನು, ಅತಿ ಆಸೆಯನ್ನು ಪ್ರತಿವರ್ಷ ಶಿಶಿರ ಮಾಸದ ಹುಣ್ಣಿಮೆಯ ದಿನದಂದು ಕಟ್ಟಿಗೆಯ ರೂಪದಲ್ಲಿ ಸುಟ್ಟು ಹಾಕುವ ಮೂಲಕ ಕಾಮದಹನವನ್ನು ನಾವು ಆಚರಿಸುತ್ತೇವೆ. ಈ ಸಮಯದಲ್ಲಿ ಕೆಟ್ಟ ಕೆಟ್ಟ ಬೈಗುಳಗಳು, ಪೋಲಿ ಮಾತುಗಳನ್ನು ಕೂಡ ಆಡಿ ತೀಟೆ ತೀರಿಸಿಕೊಳ್ಳುವ ಸಂಪ್ರದಾಯ ಇದೆ. ಲಬೋ ಎಂದು ಬಾಯಿಗೆ ಕೈಯಿಟ್ಟು ಬಾಯಿ ಬಡೆದುಕೊಳ್ಳುವ ಆ ಮೂಲಕ ಕಾಮದಹನವನ್ನು ಆಚರಿಸುವ ಪ್ರಕ್ರಿಯೆ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಪ್ರಚಲಿತವಾಗಿದೆ.

ನಾವು ಚಿಕ್ಕವರಿದ್ದಾಗ ನನ್ನ ಅಣ್ಣಂದಿರು ತಮ್ಮದೇ ಒಂದು ತಂಡ ಕಟ್ಟಿಕೊಂಡು ಮನೆ ಮನೆಯಲ್ಲಿ ಕಾಮಣ್ಣನ ಪಟ್ಟಿಯನ್ನು ಸಂಗ್ರಹಿಸಿ ಅದರ ಜೊತೆಗೆ ಉರುವಲುಗಳನ್ನು ಕೂಡ ಮನೆ ಮನೆಗಳಿಂದ ಪಡೆಯುತ್ತಿದ್ದರು. ಅವರೊಂದಿಗೆ ನಾವು ಚಿಕ್ಕ ಹೆಣ್ಣು ಮಕ್ಕಳು ಕೂಡ ಜೊತೆಗೂಡುತ್ತಿದ್ದೆವು. ಇದರ ಜೊತೆಗೆ ಮನೆಯ ಹಿತ್ತಲಿನಲ್ಲಿ ಇರುತ್ತಿದ್ದ ಸಣ್ಣ ಪುಟ್ಟ ಮರದ ನಿರುಪಯುಕ್ತ ಪೀಠೋಪಕರಣಗಳ ತುಂಡುಗಳನ್ನು, ರಟ್ಟಿನ ಡಬ್ಬಿಗಳನ್ನು ಮತ್ತಿತರ ಉರುವಲು ಸಾಮಗ್ರಿಗಳನ್ನು ಕದ್ದು ಈ ಕಾಮ ದಹನದ ಕಾರ್ಯಕ್ಕೆ ಬಳಸುತ್ತಿದ್ದೆವು. ಹೀಗೆ ತಂದ ವಸ್ತುಗಳನ್ನು ಕಾಮದಹನಕ್ಕೆ ಸಜ್ಜಾಗಿದ ಅಂಗಳದಲ್ಲಿ ಸೇರಿಸಿ ಅದರ ಮೇಲೆ ತೆಂಗಿನ ಗರಿಗಳನ್ನು ಉದ್ದಕ್ಕೆ ಸೇರಿಸಿ ಮುಚ್ಚಿ ಬಿಡುತ್ತಿದ್ದೆವು. ಹುಣ್ಣಿಮೆಯ ದಿನ ರಾತ್ರಿ ಕಾಮನ ಪೂಜೆಯನ್ನು ಮಕ್ಕಳಲ್ಲಿ ಒಬ್ಬರು ಶಾಸ್ತ್ರೋಕ್ತವಾಗಿ ಮಾಡಿ ತಮಟೆಯ ಸದ್ದಿನ ನಡುವೆ ಕಾಮಣ್ಣನನ್ನು ಸುಡುವ ಮೂಲಕ ಆಚರಿಸುತ್ತಿದ್ದೆವು.

ಮರುದಿನ ಮುಂಜಾನೆ ಈ ಕಾಮನನ್ನು ಸುಟ್ಟ ಕೆಂಡದಿಂದಲೇ ಪ್ರತಿ ಮನೆಯಲ್ಲಿಯೂ ಒಲೆ ಹಚ್ಚಿ ಅಡುಗೆ ಮಾಡುತ್ತಾರೆ ಹಾಗೆ ಒಲೆ ಇಲ್ಲದವರು ಕಾಮಣ್ಣನನ್ನು ಸುಡಲು ಬಳಸಿದ ಕಟ್ಟಿಗೆಯ ಕೆಂಡವನ್ನು ತಂದು ನೀರು ಕಾಯಿಸುವ ಒಲೆಗೆ ಹಾಕಿ ನೀರು ಕಾಯಿಸಿ ಆ ನೀರಿನಲ್ಲಿ ಸ್ನಾನ ಮಾಡುತ್ತಾರೆ. ಈ ಕೆಲಸವನ್ನು ಮನೆಯ ಅಮ್ಮ,ಅಜ್ಜಿಯಂದಿರು ಮಾಡಿದರೆ... ಅಪ್ಪ ಹಿಂದಿನ ದಿನವೇ ಅಂಗಡಿಯಿಂದ ತಂದ ಬೇರೆ ಬೇರೆ ಬಣ್ಣಗಳನ್ನು ಬೇರೆ ಬೇರೆಯಾಗಿಯೇ ಬಕೀಟುಗಳಲ್ಲಿ ಕಲಸಿ ವಿವಿಧ ಬಾಟಲಿಗಳಿಗೆ ತುಂಬಿ ಕೊಡುತ್ತಿದ್ದರು. ತುಸು ಹಳೆಯದಾದ ಬಟ್ಟೆಗಳನ್ನು ತೊಟ್ಟ ಮಕ್ಕಳು ಬಣ್ಣದ ಬಾಟಲಿಗಳನ್ನು,ಪಿಚಕಾರಿಗಳನ್ನು ಹಿಡಿದುಕೊಂಡು ಬೇರೆಯವರ ಮೇಲೆ ಬಣ್ಣವನ್ನು ಎರಚುತ್ತಾ ಖುಷಿಯಿಂದ ಕೇಕೆ ಹಾಕುತ್ತಾ ಮನೆಯ ಸುತ್ತ ಬೇರೆ ಬೇರೆ ಓಣಿಗಳಲ್ಲಿ ಓಡಾಡಿ ಬಣ್ಣ ಎರಚಿ ಸಂಭ್ರಮಿಸುತಿದ್ದರು. ಇನ್ನು ತುಸು ದೊಡ್ಡವರು ಬಣ್ಣದ ಒಣ ಪುಡಿಗಳನ್ನು ಜೇಬಿನಲ್ಲಿ ಇಟ್ಟುಕೊಂಡು ಸ್ನೇಹಿತರಿಗೆ ಮತ್ತು ಪರಿಚಿತರಿಗೆ ಬಣ್ಣವನ್ನು ಹಚ್ಚಿ ಖುಷಿಪಡುತ್ತಿದ್ದರು ಕೆಲವೊಮ್ಮೆ ಜಗಳವಾಡಿ ಮಾತು ಬಿಟ್ಟ ಸ್ನೇಹಿತರು ಕೂಡ ಹೋಳಿ ಹಬ್ಬದ ಈ ಸಮಯದಲ್ಲಿ ಒಬ್ಬರಿಗೊಬ್ಬರು ಬಣ್ಣ ಹಚ್ಚುವ ಮೂಲಕ ಮತ್ತೆ ಒಂದಾಗುತ್ತಿದ್ದರು. ಮಧ್ಯಾಹ್ನದವರಿಗೂ ಬಣ್ಣದ ಆಟವನ್ನು ಆಡಿ ಮನೆಗೆ ಬರುತ್ತಿದ್ದ ಮಕ್ಕಳಿಗೆ ಎಣ್ಣೆ ಹಚ್ಚಿ ಬಣ್ಣ ಹೋಗುವಂತೆ ತಿಕ್ಕಿ ಸ್ನಾನ ಮಾಡಲು ಹೇಳಿದರೆ ದೊಡ್ಡ ಮಕ್ಕಳು ಹತ್ತಿರದ ಹೊಳೆ ಹಳ್ಳಗಳಿಗೆ ಬಟ್ಟೆ ತೆಗೆದುಕೊಂಡು ಸ್ನಾನಕ್ಕೆ ಹೋಗುತ್ತಾರೆ. ಹೊಯ್ಕೊಂಡ ಬಾಯಿಗೆ ಹೋಳಿಗಿ ತುಪ್ಪ ಎಂಬಂತೆ ತಾಯಂದಿರು ಹೋಳಿಗೆಯನ್ನು ಮಾಡಿ ಮಿಂದು ಬಂದ ಮಕ್ಕಳಿಗೆ ಉಣಬಡಿಸುತ್ತಾರೆ.

ಬದಲಾದ ಇಂದಿನ ಕಾಲಘಟ್ಟದಲ್ಲಿ ಹೋಳಿ ಹುಣ್ಣಿಮೆಯ ಸಂಭ್ರಮ ಮರೆಯಾಗಿದ್ದರೂ ಬಣ್ಣದ ಹಬ್ಬ ತನ್ನ ರಂಗನ್ನು ಉಳಿಸಿಕೊಂಡಿದೆ. ಆಧುನಿಕ ಯುಗದಲ್ಲಿ ಅನೇಕ ರೀತಿಯ ಬಣ್ಣದ ಪಿಚಕಾರಿಗಳು ಬಂದಿದ್ದು ಮಕ್ಕಳು ವಿವಿಧ ರಂಗುಗಳನ್ನು ಪರಸ್ಪರ ಎರಚಿ ಸಂತಸ ಪಡುತ್ತಾರೆ. ಉತ್ತರ ಭಾರತದಲ್ಲಿ ಹೋಳಿ ಹಬ್ಬವನ್ನು ಹೋಲಿಕಾದಹನ ಮಾಡುವ ಮೂಲಕ ಆಚರಿಸುತ್ತಾರೆ ಅವರ ಪ್ರಕಾರ ರಾಕ್ಷಸ ಹಿರಣ್ಯಕಶಿಪುವಿನ ಮಗ ಪ್ರಹ್ಲಾದನು ಹರಿಯೇ ಸರ್ವೋತ್ತಮ, ಹರಿಯೇ ಜಗದೋದ್ಧಾರಕ ಎಂದು ತನ್ನ ತಂದೆಯ ಆಜನ್ಮ ವೈರಿ ಹರಿಯನ್ನು ಪೂಜಿಸುವುದನ್ನು ಕಂಡು ಕೋಪದಿಂದ ತನ್ನ ಮಗನನ್ನು ಸಾಯಿಸಲು ಹಲವಾರು ಬಾರಿ ಪ್ರಯತ್ನಿಸಿದನು. ಅಂತಹ ಒಂದು ಪ್ರಯತ್ನದ ಅಂಗವಾಗಿ ತನ್ನ ಸೋದರಿ ಹೋಲಿಕಾಳಿಗೆ ವರವಾಗಿ ದೊರೆತ ಸುಡದ ಅಂಗವಸ್ತ್ರವನ್ನು ಧರಿಸಿ ಪ್ರಹ್ಲಾದನನ್ನು ಬೆಂಕಿಯ ಬಾಯಿಯಲ್ಲಿ ದೂಡಲು ಆಕೆಗೆ ಕೇಳಿಕೊಂಡನು. ಅಣ್ಣನ ಮಾತನ್ನು ಮೀರದ ಹೋಲಿಕ ತನ್ನ ಅಂಗವಸ್ತ್ರವನ್ನು ಧರಿಸಿ ಪುಟ್ಟ ಪ್ರಹ್ಲಾದನನ್ನು ಎತ್ತಿಕೊಂಡು ಬೆಂಕಿಯಲ್ಲಿ ಪ್ರವೇಶಿಸಿದಳು. ಆದರೆ ಯಾವ ಮಾಯದಲ್ಲಿಯೋ ಆಕೆಯ ಅಂಗವಸ್ತ್ರವು ಆಕೆಯ ದೇಹದಿಂದ ಬಿದ್ದು ಹೋಗಿ ಆಕೆ ಸಜೀವವಾಗಿ ದಹನಗೊಂಡಳು, ಆದರೆ ಪುಟ್ಟ ಮಗು ಪ್ರಹ್ಲಾದ ಸೋಜಿಗವೆಂಬಂತೆ ಪಾರಾದನು. ಈ ದಿನ ಹೋಲಿಕ ಎಂಬ ಕಾಮನೆಯನ್ನು ಸುಟ್ಟು ಹಾಕುವ ಆಚರಣೆಯನ್ನು ಉತ್ತರ ಭಾರತೀಯರು ಮಾಡುತ್ತಾರೆ. ಹೋಲಿ ಹಬ್ಬ ಉತ್ತರ ಭಾರತೀಯರ ಪಾಲಿಗೆ ಅತಿ ದೊಡ್ಡ ಹಬ್ಬವಾಗಿದ್ದು ಹಾಡು, ಕುಣಿತ, ನೃತ್ಯ ಸಂಗೀತಗಳ ಜೊತೆ ಜೊತೆಗೆ ಭಾಂಗ್ ಎಂಬ ನಶೆಯ ಪೇಯವನ್ನು ಕೂಡ ಅವರು ಸೇವಿಸಿ ಮತ್ತರಾಗುತ್ತಾರೆ. ಇತ್ತೀಚಿಗಿನ ದಿನಗಳಲ್ಲಿ ಬಾಲಿವುಡ್ ನಲ್ಲಿ ಹೋಲಿ ಪಾರ್ಟಿ ಎಂದು ಚಿತ್ರರಂಗದ ಎಲ್ಲರನ್ನೂ ಆಮಂತ್ರಿಸಿ ದೊಡ್ಡ ರೀತಿಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ.

ಇನ್ನು ನರಸಿಂಹದೇವರ ದೇವಸ್ಥಾನವಿರುವ ಕಡೆಗಳಲ್ಲಿ ಹೋಳಿಹಬ್ಬವನ್ನು ಆಚರಿಸುವುದಿಲ್ಲ. ನರಸಿಂಹದೇವರ ದೇವಸ್ಥಾನವಿರುವ ಸುತ್ತಲ ಏಳು ಹಳ್ಳಿಗಳಲ್ಲಿ ಕಾಮದಹನ,ಬಾಯಿ ಬಡಿದುಕೊಳ್ಳುವ, ಕೆಟ್ಟ ಮಾತುಗಳನ್ನು ಹೇಳುವ ಯಾವುದೇ ಆಚರಣೆಗಳು ಇಲ್ಲ. ಜೊತೆಗೆ ಬಣ್ಣದ ಹಬ್ಬವು ಇಲ್ಲ. ಅದೆಷ್ಟೇ ಆಕರ್ಷಣೀಯವಾದರೂ ಬಣ್ಣದ ಈ ಹಬ್ಬವನ್ನು ಈ ಭಾಗಗಳಲ್ಲಿ ಆಚರಿಸುವುದಿಲ್ಲ. ಅಷ್ಟಾಗಿಯೂ ಆಚರಿಸಬೇಕೆಂಬ ಆಸಕ್ತಿಯುಳ್ಳವರು ತಮ್ಮ ಊರನ್ನು ಬಿಟ್ಟು ಬೇರೆ ಊರುಗಳಿಗೆ ಬಣ್ಣದ ಆಟ ಆಡಲು ತೆರಳುತ್ತಾರೆ. ಇನ್ನು ಕೆಲ ಪ್ರದೇಶಗಳಲ್ಲಿ ಹೋಳಿ ಹುಣ್ಣಿಮೆಯ ದಿನ ಕಾಮ ಮತ್ತು ರತಿದೇವಿಯರನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ನಾಲ್ಕು ದಿನಗಳ ಕಾಲ ಕಾಮ ರತಿದೇವಿಯರನ್ನು ಪೂಜಿಸಿ 4ನೇ ದಿನ ರಾತ್ರಿ ಕಾಮದಹನವನ್ನು ಮಾಡುತ್ತಾರೆ. ಐದನೆಯ ದಿನ ಬಣ್ಣದ ಹಬ್ಬವನ್ನು ರಂಗ ಪಂಚಮಿ ಎಂದು ಆಚರಿಸುತ್ತಾರೆ.

ಜೀವಂತ ಕಾಮದೇವ ಮತ್ತು ರತಿದೇವಿಯರನ್ನು ಕೂಡ ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲಿ ನೋಡಬಹುದು. ಕಣ್ಣು ಪಿಳುಕಿಸದೆ ಯಾವುದೇ ರೀತಿಯ ಚಟುವಟಿಕೆಗಳನ್ನು ಮಾಡದೆ ಅಲಂಕಾರಗೊಂಡ ಕಲಾವಿದರು ಗಂಟೆಗಟ್ಟಲೆ ಒಂದೇ ಭಂಗಿಯಲ್ಲಿ ಕುಳಿತುಕೊಳ್ಳುವುದನ್ನು ನೋಡಬಹುದು. ತಮ್ಮ ಮನೆಯ ಸೀರೆ ವಸ್ತ್ರಗಳನ್ನು ಕಾಮದೇವ ಮತ್ತು ರತಿದೇವಿಯರಿಗೆ ಹಾಕಿ ಸಂತೋಷ ಪಡುವ ಜನರು ಕೂಡ ಇದ್ದಾರೆ. ಇನ್ನು ಕೆಲವರು ತಮ್ಮ ಮನೆಯ ಚಿನ್ನದ ಆಭರಣಗಳನ್ನು ಕೂಡ ಕಾಮದೇವ ಮತ್ತು ರತಿ ದೇವಿಯರಿಗೆ ಅಲಂಕರಿಸಲು ಕೊಡುತ್ತಾರೆ. ಕಾಮದಹನದ ನಂತರ ತಮ್ಮ ವಸ್ತುಗಳನ್ನು ಮರಳಿ ಪಡೆಯುತ್ತಾರೆ. ಮದುವೆಯಾಗದ ಯುವಕ ಯುವತಿಯರು, ಮಕ್ಕಳಾಗದ ದಂಪತಿಗಳು ಕಾಮದೇವ ರತಿದೇವಿಯರಲ್ಲಿ ಪ್ರಾರ್ಥಿಸಿ ಹರಕೆ ಕಟ್ಟಿಕೊಳ್ಳುತ್ತಾರೆ. ಮುಂದೆ ಮದುವೆಯಾದ ನಂತರ,ಮಕ್ಕಳಾದ ನಂತರ ತಮ್ಮ ಹರಕೆಯನ್ನು ತೀರಿಸುತ್ತಾರೆ.

ಇತ್ತೀಚೆಗೆ ಬಣ್ಣದ ಹಬ್ಬದ ನೆಪದಲ್ಲಿ ಸ್ನೇಹ ಬಾಂಧವ್ಯವನ್ನು ಒಡ್ಡಿಕೊಂಡು ಅವರ ಒಪ್ಪಿಗೆ ಇಲ್ಲದೆ ಬಣ್ಣ ಹಚ್ಚುವ ನೆಪದಲ್ಲಿ ವಾರ್ನಿಸ್, ಪೇಯಿಂಟ್ಗಳನ್ನು ಹಚ್ಚುವುದು ನಂತರ ಬಣ್ಣದ ಹಬ್ಬದ ಪಾರ್ಟಿ ಮಾಡುವ ಹೆಸರಿನಲ್ಲಿ ಕುಡಿದು ತಿಂದು ಮೋಜು ಮಾಡಿ ನಶೆಯ ಮತ್ತಿನಲ್ಲಿ ನದಿಯಲ್ಲಿ ಸ್ನಾನ ಮಾಡಲು ಹೋಗಿ ಜೀವ ಕಳೆದುಕೊಂಡ ಹಲವಾರು ಉದಾಹರಣೆಗಳಿವೆ. ಹೋಳಿ ಹಬ್ಬದ ನೆಪದಲ್ಲಿ ಅನವಶ್ಯಕ ಮೋಜು ಮೇಜವಾನಿಯಂತಹ ವಿಕೃತಿಗಳಲ್ಲಿ ತೊಡಗದೆ, ಆರೋಗ್ಯಕರ ಸಂಬಂಧವನ್ನು ಬೆಳೆಸುವ, ಪ್ರೀತಿ ವಿಶ್ವಾಸವನ್ನು ವೃದ್ಧಿಸುವ ನಿಟ್ಟಿನಲ್ಲಿ ಹಬ್ಬಗಳನ್ನು ಆಚರಿಸಬೇಕು.

ಹಳೆಯ ಆಚರಣೆಗಳು ಮತ್ತು ಹೊಸ ಸಂಭ್ರಮಗಳ ಸಂಗಮದ ಈ ಹೋಲಿ ಹಬ್ಬ ನಮ್ಮೆಲ್ಲರ ಜೀವನದಲ್ಲಿ ಸುಖ ಸಮೃದ್ಧಿ ನೆಮ್ಮದಿಯನ್ನು ತರಲಿ.

## ತೋಟಗಾರಿಕೆಯಿಂದ ಸಹಾಯಧನ ಅರ್ಹ ರೈತರಿಂದ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ತೋಟಗಾರಿಕೆ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ರೈತ ಫಲಾನುಭವಿಗಳಿಗೆ 2024-25ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ಸಹಾಯಧನ ಪಡೆಯಲು ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಅವರು ತಿಳಿಸಿದ್ದಾರೆ.

**ಯೋಜನೆಗಳು:** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಬಾಳೆ, ಅಂಜೂರ, ದಾಳಿಂಬೆ, ನುಗ್ಗೆ, ಪೇರಲ, ಪಪ್ಪಾಯ, ತೆಂಗು, ಡ್ರ್ಯಾಗನ್ ಫ್ರೂಟ್, ನೇರಳೆ, ಸಪೋಟ, ಮಾವು, ಸೀತಾಫಲ, ಹುಣಸೆ, ಕರಿಬೇವು ಮತ್ತು ಗುಲಾಬಿ ಹಾಗೂ ಇತರೆ ಬೆಳೆಗಳಿಗೆ ಮತ್ತು ಬದುಗಳಲ್ಲಿ ತೆಂಗು ಸಸಿ ನಾಟಿ, ಕೃಷಿ ಹೊಂಡ, ಬದುಗಳ ನಿರ್ಮಾಣ, ಕೊಳವೆ ಬಾವಿ ಮರುಪೂರಣ ಘಟಕಗಳಿಗೆ ಸಹಾಯಧನ ನೀಡಲಾಗುವುದು.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ:

ಹೊಸ ಪ್ರದೇಶ ವಿಸ್ತರಣೆ, ಕೃಷಿಹೊಂಡ, ಈರುಳ್ಳಿ ಶೇಖರಣ ಘಟಕ, ನೆರಳುಪರದೆ, ಪ್ಯಾಕ್ ಹೌಸ್ ಮತ್ತು ತಳ್ಳುವ ಗಾಡಿ ವಿವಿಧ ಘಟಕಗಳಿಗೆ ಎಲ್ಲಾ ವರ್ಗದ ರೈತರಿಗೆ ಶೇ.50 ರಷ್ಟು ಲಭ್ಯತೆಯ ಮೇರೆಗೆ ಸಹಾಯಧನ ವಿತರಿಸಲಾಗುತ್ತದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ-ಹನಿ ನೀರಾವರಿ:

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ-ಹನಿ ನೀರಾವರಿ ಕಾರ್ಯ ಕ್ರಮದಡಿ ಸಹಾಯಧನವನ್ನು ನೀಡಲಾಗುತ್ತದೆ. ಸಾಮಾನ್ಯ ವರ್ಗದ ರೈತರಿಗೆ ಹೊಸದಾಗಿ ಅಳವಡಿಸುವ ಫಲಾನುಭವಿಗಳಿಗೆ ಮಾತ್ರ ಶೇ.75 ರಂತೆ ಹಾಗೂ ಪ.ಜಾತಿ ಮತ್ತು ಪ.ಪಂಗಡ ಫಲಾನುಭವಿಗಳಿಗೆ ಶೇ.90 ರಂತೆ ಸಹಾಯಧನ ವಿತರಿಸಲಾಗುವುದು. ಅಲ್ಪಸಂಖ್ಯಾತರಿಗೆ ಶೇ.15,ವಿಕಲಾಂಗಚೇತನರಿಗೆ ಶೇ.5 ಮತ್ತು ರೈತ ಮಹಿಳೆಯರಿಗೆ ಶೇ.33 ರಷ್ಟು ಅನುದಾನ ಮೀಸಲಿರಿಸಲಾಗಿದೆ. ಆಸಕ್ತ ರೈತರು ಈ ಯೋಜನೆಗಳ ಸಹಾಯಧನ ಸೌಲಭ್ಯ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ತೋಟಗಾರಿಕೆ ಇಲಾಖೆ ಕಚೇರಿಗೆ ಸಂಪರ್ಕಿಸಿ, ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

## ಅಗ್ನಿ ಬನ್ನಿರಾಯ ಜಯಂತಿ ಜಿಲ್ಲಾಡಳಿತದಿಂದ ಆಚರಣೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಅಗ್ನಿಬನ್ನಿರಾಯ ಜಯಂತಿಯನ್ನು ಗುರುವಾರ ಸರಳವಾಗಿ ಆಚರಿಸಲಾಯಿತು.

ಲೋಕಸಭೆ ಸಾರ್ವತ್ರಿಕ ಚುನಾವಣೆ-2024ರ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಂಗಿರಣ ಸಭಾಂಗಣದಲ್ಲಿ ಅಗ್ನಿ ಬನ್ನಿರಾಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.


**ಮಕ್ಕಳು ಅರಸರಾಗಬೇಕೆ?**
ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?



**ಸಿರಿ ಮೋಟಾರ್ಸ್ ಶೋರೂಂ ಸ್ಥಳಾಂತರ**
ಹೊಸಪೇಟೆ 100 ಹಾಸಿಗೆ ಆಸ್ಪತ್ರೆ ರಸ್ತೆಯಿಂದ ಚಿತ್ತವಾಡ್ಗಿ ತಿರುಮಲ ನಗರದ ಬಳಿ ಹಾದುಹೋಗಿರುವ ಬೈಪಾಸ್ ರಸ್ತೆ ಪಕ್ಕಕ್ಕೆ (ಸಿದ್ದಿಪ್ರಿಯ ಕಲ್ಯಾಣ ಮಂಟಪ ಸಮೀಪ)
ಸಿರಿ ಮೋಟಾರ್ಸ್ PURE ಇವಿ ಎಲೆಕ್ಟ್ರಿಕಲ್ ಶೋರೂಂನ್ನು ಸ್ಥಳಾಂತರಿಸಲಾಗಿದೆ.
PURE ಇವಿ ಎಲೆಕ್ಟ್ರಿಕಲ್, ಸರ್ವೀಸ್‌ಗಾಗಿ ಭೇಟಿ ನೀಡಿರಿ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ
88845 33361

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಶೋಭಾಕೃತ

**29-03-2024 – ಶುಕ್ರವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ವಿಶಾಖ |
| ಯೋಗ | : ವಜ್ರ |
| ಕರಣ | : ಭವ |
| ಸೂರ್ಯೋದಯ | : 06:23:07 |
| ಸೂರ್ಯಾಸ್ತ | : 18:40:14 |
| ರಾಹು | : 10:59–12:32 |
| ಯಮಘಂಡ | : 15:36–17:08 |
| ಗುಳಿಕ | : 07:55–09:27 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 28–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.16 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 911 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 5.062 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1588.42 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 6936 ಕ್ಯೂಸೆಕ್ |
| ಸಾಮರ್ಥ್ಯ | 9.746 ಟಿಎಂಸಿ |

# ವೈದ್ಯಕೀಯ ಪದವೀಧರರು ಉತ್ತಮ ಸೇವೆ ನೀಡಿ

## ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಚಂದ್ರಮೋಹನ್ ಹೇಳಿಕೆ

## ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ 63ನೇ ಪದವಿ ಪ್ರದಾನ ಸಮಾರಂಭ ಉದ್ಘಾಟನೆ

■ ಹಂಪಿ ಟೈಮ್ಸ್ ಬಳ್ಳಾರಿ

ವೈದ್ಯಕೀಯ ಪದವಿ ಪೂರ್ಣಗೊಳಿಸಿದ ಪಧವೀದರರು ಸಮಾಜದಲ್ಲಿ ಉತ್ತಮ ವೈದ್ಯಕೀಯ ಸೇವೆ ನೀಡಬೇಕು ಎಂದು ತಮಿಳುನಾಡು ಸರ್ಕಾರದ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಚಂದ್ರಮೋಹನ್.ಬಿ ಅವರು ಹೇಳಿದರು.

ಇಲ್ಲಿಯ ವಿಮ್ಸ್ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 63ನೇ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವೈದ್ಯಕೀಯ ವೃತ್ತಿಯಲ್ಲಿ ತೊಡಗುವವರು ವೈದ್ಯಕೀಯ ಕ್ಷೇತ್ರಕ್ಕೆ ಸೀಮಿತವಾಗದೇ, ಬಾಹ್ಯ ಪ್ರಪಂಚವನ್ನು ಉತ್ಸುಕದಿಂದ ಅನ್ವೇಷಿಸುವ ಕಾರ್ಯ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ವೈದ್ಯಕೀಯ ಪದವಿ ಪೂರ್ಣಗೊಳಿಸಿದವರು ನೀವು ಎಷ್ಟು ದೂರ ಬಂದಿದ್ದೀರಿ ಎಂಬುದರ ಬಗ್ಗೆ ಹೆಮ್ಮೆಪಡಬೇಕು ಮತ್ತು ಅದೇರೀತಿ ಎಷ್ಟು ಎತ್ತರ ಬೆಳೆಯಬಹುದು ಎಂಬುದರಲ್ಲಿ ನಂಬಿಕೆ ಇಟ್ಟು, ಜನಸಾಮಾನ್ಯರಿಗೆ ಪ್ರಾಮಾಣಿಕ ಸೇವೆ ನೀಡುವುದರ ಮೂಲಕ ತಮ್ಮ ಕರ್ತವ್ಯವನ್ನು ಆನಂದಿಸಬೇಕು ಎಂದು ಕಿವಿಮಾತು ಹೇಳಿದರು.

ವೈದ್ಯಕೀಯ ವಿದ್ಯಾರ್ಥಿಗಳು ಹೃದಯದಲ್ಲಿ ಧೈರ್ಯ, ಮನಸ್ಸಿನಲ್ಲಿ ನಮ್ರತೆ ಮತ್ತು ಬದಲಾವಣೆ ರೂಪಿಸುವ ಅಚಲ ಸಂಕಲ್ಪದೊಂದಿಗೆ ಮುಂದುವರಿಯಿರಿ ಎಂದು ಕರೆ ನೀಡಿದರು.




ಜಿಲ್ಲಾಧಿಕಾರಿ ಹಾಗೂ ವಿಮ್ಸ್ ಆಡಳಿತ ಮಂಡಳಿಯ ಸದಸ್ಯರಾದ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ವೈದ್ಯರು ರೋಗಿಗಳೊಡನೆ ಉತ್ತಮವಾಗಿ ಸ್ಪಂದಿಸಿ ತಾಳ್ಮೆಯಿಂದ ವರ್ತಿಸುವುದು ವೈದ್ಯರ ಆದ್ಯ ಕರ್ತವ್ಯವಾಗಿದ್ದು, ಸಹಕಾರ-ಸಹಾಯ ಮನೋಭಾವನೆ ಗುಣ ವೈದ್ಯರಲ್ಲಿ ಇರಬೇಕು. ಇದರಿಂದ ಜಿಲ್ಲೆಯ ಜನ ಸಾಮಾನ್ಯರು ತಮ್ಮ ಬಗ್ಗೆ ಹೆಮ್ಮೆಪಡಬೇಕು ಎಂದು ಹೇಳಿದರು.

ವಿಮ್ಸ್‌ನ ನಿರ್ದೇಶಕ ಹಾಗೂ ಡೀನ್ ಆದ ಡಾ.ಟಿ.ಗಂಗಾಧರ ಗೌಡ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲಿಕೆ ಎನ್ನುವುದು ಜೀವನದುದ್ದಕ್ಕೂ ಇದ್ದು, ಇದಕ್ಕೆ ಕೊನೆಯಿಲ್ಲ, ವೈದ್ಯಕೀಯ ವಿದ್ಯಾರ್ಥಿಗಳು ಪ್ರಸ್ತುತವಿರುವ ಜ್ಞಾನಕ್ಕೆ ತಕ್ಕಂತೆ ನವೀಕರಣಗೊಂಡು ಅಭಿವೃದ್ಧಿ ಹೊಂದಬೇಕು ಎಂದು ಕಿವಿ ಮಾತು ಹೇಳಿದರು.

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವೈದ್ಯಕೀಯ ಪದವಿ ಪಡೆದ ಪದವೀಧರರು ವಿಶ್ವದಾದ್ಯಂತ ಮನ್ನಣೆಗಳಿಸಿದ್ದಾರೆ. ಅವರಂತೆ ತಾವೂ ಕೂಡ ಸಾಧನೆಯ ಮೈಲಿಗಲ್ಲು ತಲುಪಬೇಕು ಎಂದು ಪದವಿ ಪಡೆದ ವೈದ್ಯಕೀಯ ವಿದ್ಯಾರ್ಥಿಗಳನ್ನು ಆಶಿಸಿದರು.

ಯು.ಎಸ್.ಎ ನ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಕ ಡಾ.ಪಿ.ವಿ.ಪತಂಜಲಿ ಶರ್ಮಾ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಬಳ್ಳಾರಿಯಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣದ ಕನಸು ಈಗ ನನಸಾಗಿದ್ದು, ನನ್ನ ಎಲ್ಲಾ ಸಾಧನೆಗೆ ವಿಮ್ಸ್ ಸಂಸ್ಥೆಯು ಅಡಿಪಾಯವಾಗಿದೆ ಎಂದರು.

ಕಳೆದ ಸಾಲಿನಿಂದ ಡಾ.ಪಿ.ವಿ.ಪತಂಜಲಿ ಶರ್ಮಾ ಅವರ ಪ್ರಾಯೋಜಕತ್ವದಲ್ಲಿ ಬಂಗಾರದ ಪದಕ ಮತ್ತು ಹತ್ತು ಸಾವಿರ ನಗದು ಹಣವನ್ನು ರ್‍ಯಾಂಕ್ ಪಡೆದ ಮೂರು ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೊಡುಗೆಯಾಗಿ ನೀಡಲಾಗುತ್ತಿದೆ. ಇದು ಸಂತಸದ ವಿಷಯವಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ 95 ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ 55 ಸ್ನಾತಕ ಪದವಿ ವೈದ್ಯಕೀಯ ವಿದ್ಯಾರ್ಥಿಗಳು ಸೇರಿದಂತೆ 150 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಈ ಸಂಧರ್ಭದಲ್ಲಿ ಕರ್ನಾಟಕ ವೈದ್ಯಕೀಯ ಮಂಡಳಿಯ ಸದಸ್ಯ ಡಾ.ವೈ.ಸಿ.ಯೋಗಾನಂದ ರೆಡ್ಡಿ, ವಿಮ್ಸ್‌ನ ಪ್ರಭಾರಿ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ, ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಸುಮಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು, ಜಿಲ್ಲಾ ಆಸ್ಪತ್ರೆಯ ನಿರ್ದೇಶಕ ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ.ಎನ್ ಸೇರಿದಂತೆ ವಿಮ್ಸ್‌ನ ಹಳೆಯ ವಿದ್ಯಾರ್ಥಿಗಳು, ನಿವೃತ್ತ ಪ್ರಾಂಶುಪಾಲರು, ವೈದ್ಯಕೀಯ ವಿದ್ಯಾರ್ಥಿಗಳು, ಪೋಷಕರು ಮತ್ತು ಇನ್ನಿತರರು ಉಪಸ್ಥಿತರಿದ್ದರು.

# ಮತದಾನ ಪ್ರಮಾಣ ಹೆಚ್ಚಿಸಲು ಮನೆ ಸಮೀಕ್ಷೆ ನಡೆಸಿ

■ ಹಂಪಿ ಟೈಮ್ಸ್ ಬಳ್ಳಾರಿ

ಕಳೆದ ಬಾರಿ 91-ಕಂಪ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಅತೀ ಕಡಿಮೆ ಮತದಾನವಾದ ಮತಗಟ್ಟೆಗಳಲ್ಲಿ, ಮತದಾನದ ಪ್ರಮಾಣವನ್ನು ಹೆಚ್ಚಿಸಲು ಮನೆ ಸಮೀಕ್ಷೆ ನಡೆಸಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿ ನೋಡೆಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಸೂಚನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ, ತಾಲ್ಲೂಕು ಆಡಳಿತ ಕುರುಗೋಡು, ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಇಂದು ಕುರುಗೋಡು ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಲೋಕಸಭಾ ಚುನಾವಣೆಯ ಅಂಗವಾಗಿ ಮತದಾರರಿಗೆ ಮತದಾನದ ಜಾಗೃತಿ ಮೂಡಿಸುವ ಕುರಿತು



91-ಕಂಪ್ಲಿ ವಿಧಾನಸಭೆ ಕ್ಷೇತ್ರದ ಬೂತ್ ಮಟ್ಟದ ಅಧಿಕಾರಿಗಳು, ಸೆಕ್ಟರ್ ಅಧಿಕಾರಿಗಳಿಗೆ ಗುರುವಾರ ಹಮ್ಮಿಕೊಂಡಿದ್ದ ಶಿಕ್ಷಣ ಮತ್ತು ಜಾಗೃತಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮ ಪಂಚಾಯತ್‌ವಾರು ಗುಳೆ ಹೋದವರ ಕುರಿತು ಮಾಹಿತಿ ಸಂಗ್ರಹಿಸಿ, ಅವರಿಗೆ ಕರೆಮಾಡಿ, ನರೇಗಾ ಯೋಜನೆಯಡಿ ನಿಮಗೆ ನಿಮ್ಮ ಊರಿನಲ್ಲೇ ಕೆಲಸ ಕೊಡಲಾಗುವುದು ಎಂದು ತಿಳಿಸಬೇಕು. ನರೇಗಾ ಯೋಜನೆಯ ಕುರಿತು ವ್ಯಾಪಕ ಪ್ರಚಾರ ನೀಡಬೇಕು ಎಂದು ತಿಳಿಸಿದರು. ಕೆಲಸ ಮಾಡುವ ಸಮಯದಲ್ಲಿ 06 ತಿಂಗಳಿನಿಂದ 03 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಶಿಶುಪಾಲನಾ ಕೇಂದ್ರ ಪ್ರಾರಂಭ ಮಾಡಲಾಗಿದ್ದು, ಇದರ ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಲು ಎಲ್ಲಾ ಬೂತ್ ಮಟ್ಟದ ಅಧಿಕಾರಿಗಳಿಗೆ ತಿಳಿಸಿದರು.

ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ತಹಶೀಲ್ದಾರರೇಣುಕಾ,ತಾಪಂಕಾರ್ಯನಿರ್ವಾಹಕ ಅಧಿಕಾರಿ ನಿರ್ಮಲಾ ಸೇರಿದಂತೆ ಕುರುಗೋಡು, ಕಂಪ್ಲಿ ಹಾಗೂ ವಿಧಾನಸಭಾ ವ್ಯಾಪ್ತಿಯ ಬಿಎಲ್‌ಓ, ಸೆಕ್ಟರ್ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಸ್ವಯಂ ಉದ್ಯೋಗಕ್ಕೆ ತರಬೇತಿ

■ ಹಂಪಿ ಟೈಮ್ಸ್ ಕೊಪ್ಪಳ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಕೊಪ್ಪಳ ವತಿಯಿಂದ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಬ್ಯೂಟಿ ಪಾರ್ಲರ್ ಮತ್ತು ಮಹಿಳಾ ಹೊಲಿಗೆ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕನಿಷ್ಠ ಎಂಟನೇ ತರಗತಿ ಉತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು. ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ಏಪ್ರಿಲ್ 10 ರಂದು ಸಂದರ್ಶನ ನಡೆಯಲಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ಏ.12 ರಿಂದ ತರಬೇತಿ ಆರಂಭಿಸಲಾಗುವುದು. ಆಸಕ್ತರು ಆಧಾರ್ ಕಾರ್ಡ್, ರೇಷನ್ ಕಾರ್ಡ್, ಮಾರ್ಕ್ಸ್ ಕಾರ್ಡ್‌ಗಳ ಜೆರಾಕ್ಸ್ ಪ್ರತಿಗಳು ಹಾಗೂ 03 ಪಾಸ್‌ಪೋರ್ಟ್ ಭಾವಚಿತ್ರಗಳೊಂದಿಗೆ ನಿರ್ದೇಶಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಕೈಗಾರಿಕಾ ಕೇಂದ್ರ ಆವರಣ, ಅಶೋಕ ಸರ್ಕಲ್ ಹತ್ತಿರ, ಕೊಪ್ಪಳ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08539-231038, 9483618178, 9481085217, 7259073827, 6364173983 ಗೆ ಸಂಪರ್ಕಿಸಿ

# ವಿಶ್ವಮಟ್ಟದ ಜಾನಪದ ತಜ್ಞ ಡಾ. ಬಸವರಾಜ ಮಲಶೆಟ್ಟಿ

ಮೊದಲ ಪುಟದಿಂದ

ಪ್ರಾಧ್ಯಾಪಕರಾಗಿ ನಿರಂತರ ಅಧ್ಯಯನ ಅಧ್ಯಾಪನದಲ್ಲಿ ತೊಡಗಿಸಿಕೊಂಡ ಅವರು, ಕಿರಿಯ ತಲೆಮಾರಿಗೆ ಮಾದರಿಯಾಗಿದ್ದಾರೆ. ಪ್ರಶಿಕ್ಷಣಾರ್ಥಿಗಳು ಡಾ.ಮಲಶೆಟ್ಟಿ ಅವರ ಜೀವನ ವಿಧಾನವನ್ನು ರೂಪಿಸಿಕೊಳ್ಳಬೇಕು. ಇದೇ ಸಂದರ್ಭದಲ್ಲಿ ಲೇಖಕ, ಕವಿ, ನಾಟಕಕಾರ ಮುದೇನೂರು ಉಮಾಮಹೇಶ್ವರ ಅವರ 'ಹಿಗಿದ್ದೇನೆ' ಎಂಬ ಕವನ ಸಂಕಲನ ಬಿಡುಗಡೆ ಮಾಡಿದರು. ಪ್ರತಿಯೊಬ್ಬರಲ್ಲಿ ಕವಿಮನಸ್ಸು ಇರುತ್ತದೆ. ನಾವು ಬದುಕುತ್ತಿರುವ ಪರಿಸರವನ್ನು ಉದ್ದೀಪನಗೊಳಿಸಿಕೊಂಡು ಕಾವ್ಯಕ್ಕೆಯಿಗೆ ತೊಡಗಿದಾಗ ನಮ್ಮ ಭಾಷಾ ಸೌಂದರ್ಯವು ಹೆಚ್ಚಾಗುತ್ತದೆ. ಕಾವ್ಯದ ಭಾಷಾ ಸೌಂದರ್ಯವೂ ಮನಸ್ಸಿಗೆ ಮುದ ನೀಡುತ್ತದೆ ಎಂದರು.

ಶಾ ಭವರಲಾಲ್ ಬಾಬುಲಾಲ್ ನಹರ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ವಿಶ್ವನಾಥಗೌಡ ಅಧ್ಯಕ್ಷತೆವಹಿಸಿ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ವಿದ್ವಾಂಸರು ಪ್ರಶಿಕ್ಷಣಾರ್ಥಿಗಳಿಗೆ ಡಾ. ಬಸವರಾಜ ಮಲಶೆಟ್ಟಿ ಅವರಂಥ ವಿದ್ವಾಂಸರ ಪರಿಚಯವನ್ನು ಮಾಡಿಕೊಡುವುದರಿಂದ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಕೆ. ರವೀಂದ್ರನಾಥ ದತ್ತಿ ಉಪನ್ಯಾಸದ ಉದ್ದೇಶ ಮತ್ತು ಶರಣ ಸಾಹಿತ್ಯ ಪರಿಷತ್ತಿನ ಆಶಯವನ್ನು ಪ್ರಾಸ್ತಾವಿಕವಾಗಿ ಪರಿಚಯಿಸಿದರು. ಇದೇ ಸಂದರ್ಭದಲ್ಲಿ ಡಾ. ಕೆ ರವೀಂದ್ರನಾಥ ಅವರು ವೈಯಕ್ತಿಕವಾಗಿ ಶಿಕ್ಷಣ ಮಹಾವಿದ್ಯಾಲಯದ ಗ್ರಂಥಾಲಯಕ್ಕೆ 75 ಕೃತಿಗಳನ್ನು ದೇಣಿಗೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಕೋಶಾಧಿಕಾರಿ ಜಿ ಬಸವನರಾಜ, ಪ್ರಧಾನ ಕಾರ್ಯದರ್ಶಿ ಎಸ್.ಎಂ. ರವಿಕುಮಾರ್, ಕಾರ್ಯದರ್ಶಿ ಬಿ. ಸತೀಶ್‌ಗೌಡ, ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸೌಭಾಗ್ಯ ಲಕ್ಷ್ಮಿ, ಹಗರಿಬೊಮ್ಮನಹಳ್ಳಿ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಇಂದುಮತಿ, ನಿವೃತ್ತ ಇಂಜಿನಿಯರ್ ಕೆ.ಎಂ.ಬಸವರಾಜ, ಚಂದ್ರಶೇಖರಯ್ಯ ರೋಣದ ಮಠ, ಸೋ.ದಾ. ವಿರುಪಾಕ್ಷಗೌಡ, ಯಮುನಪ್ಪ, ಲಕ್ಷ್ಮೀಂದ್ರಸ್ವಾಮಿ ಇತರರು ಇದ್ದರು.

# ಕುಡಿಯುವ ನೀರಿನ ಸಮಸ್ಯೆಗೆ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಮೇವಿನ ಕೊರತೆ ಉಂಟಾದಲ್ಲಿ ಹಾಗೂ ಬೆಳೆ ಹಾನಿ ಪರಿಹಾರದ ಹಣ ಖಾತೆಗೆ ಜಮಾ ಆಗದೇ ಇರುವ ಬಗ್ಗೆ ದೂರುಗಳಿದ್ದಲ್ಲಿ ಸಾರ್ವಜನಿಕರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆರಂಭಿಸಲಾಗಿರುವ ಸಹಾಯವಾಣಿ ಸಂಖ್ಯೆ 1077 ಅಥವಾ 08392-277100 ಗೆ ಕರೆ ಮಾಡಿ ತಿಳಿಸಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಕೋರಿದ್ದಾರೆ.

2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬಳ್ಳಾರಿ ಜಿಲ್ಲೆಯ 5 ತಾಲ್ಲೂಕುಗಳನ್ನು (ಬಳ್ಳಾರಿ, ಸಂಡೂರು, ಸಿರುಗುಪ್ಪ, ಕುರುಗೋಡು ಮತ್ತು ಕಂಪ್ಲಿ) ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿ ಆದೇಶಿಸಿದೆ. ಮುಂದಿನ ದಿನಗಳಲ್ಲಿಬರದತೀವ್ರತೆಹೆಚ್ಚಾಗುವಸಂಭವದಿರುವುದರಿಂದ ಈ ಸಮಸ್ಯೆಯನ್ನು ಎದುರಿಸಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲಾಗಿದ್ದು, ಕುಡಿಯುವ ನೀರು, ಮೇವಿನ ಕೊರತೆಯಾದಲ್ಲಿ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಅವರು ಕೋರಿದ್ದಾರೆ.

# ಜೆಎಸ್‌ಎಸ್ ಶಾಲೆ: ಉಚಿತ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಸುತ್ತೂರು ಶ್ರೀಕ್ಷೇತ್ರದ ಜೆಎಸ್‌ಎಸ್ ಶಾಲೆ ಹಾಗೂ ಉಚಿತ ವಿದ್ಯಾರ್ಥಿ ನಿಲಯದ 2024-25ನೇ ಸಾಲಿನ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕನ್ನಡ ಮಾಧ್ಯಮಕ್ಕೆ 1 ರಿಂದ 8ನೇ ತರಗತಿವರೆಗೆ ಮತ್ತು ಇಂಗ್ಲೀಷ್ ಮಾಧ್ಯಮಕ್ಕೆ 1, 5 ಹಾಗೂ 8ನೇ ತರಗತಿಗಳಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿದೆ. ಗ್ರಾಮಾಂತರ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಬಾಲಕ ಹಾಗೂ ಬಾಲಕಿಯರಿಗೆ ಪ್ರವೇಶ ನೀಡಲಾಗುವುದು.

ಅರ್ಜಿಯನ್ನು ಶಾಲಾ ಕಚೇರಿಯಲ್ಲಿ ಖುದ್ದಾಗಿ ಪಡೆಯಬಹುದು ಅಥವಾ ತಿತಿತಿ.ಫಿಚಿಚಿಠಿಟಿಚಿತಿಣಡಿಚಿಞಚಿ.ಣ ಡಿಆ ಹಾಗೂ ತಿತಿತಿ.ಞಚಿಟಿಟಿಚಿಜಚಿ.ಡಿಆ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದೂರವಾಣಿಯಲ್ಲಿ ಸಂಪರ್ಕಿಸಿದರೆ ವಾಟ್ಸ್‌ಆಪ್ ಮೂಲಕವೂ ಅರ್ಜಿ ನಮೂನೆಯನ್ನು ಕಳುಹಿಸಿಕೊಡಲಾಗುವುದು.

ಅಂಚೆ ಮುಖಾಂತರ ಅರ್ಜಿ ಪಡೆಯಲು ಇಚ್ಚಿಸುವವರು, ವಿದ್ಯಾರ್ಥಿಯು ಪ್ರವೇಶ ಬಯಸುವ ತರಗತಿಯ ವಿವರ ಹಾಗೂ ಸ್ವ-ವಿಳಾಸವುಳ್ಳ 5 ರೂ.ಗಳ ಪೋಸ್ಟಲ್ ಸ್ಟ್ಯಾಂಪ್ ಹಚ್ಚಿದ ಲಕೋಟೆಯನ್ನು ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು-571129, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ. ಈ ವಿಳಾಸಕ್ಕೆ ಕಳುಹಿಸಿ ಪಡೆಯಬಹುದು. ಕ್ಯೂ.ಆರ್. ಕೋಡ್ ಮೂಲಕವೂ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಮೇ 15ರ ಒಳಗಾಗಿ ಸಲ್ಲಿಸಬೇಕು.

ಭರ್ತಿ ಮಾಡಿದ ಅರ್ಜಿಯ ಜೊತೆಗೆ ಹಿಂದಿನ ತರಗತಿಯ ಅಂಕಪಟ್ಟಿ, ಭಾವಚಿತ್ರ, ವಿದ್ಯಾರ್ಥಿ ಮತ್ತು ಪೋಷಕರ ಆಧಾರ್‌ಕಾರ್ಡ್, ರೇಷನ್‌ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಅಂಚೆ ಮುಖಾಂತರ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು-571129, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ ಈ ವಿಳಾಸಕ್ಕೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೊ.7411486938 ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ದೂ.08221-232054, ಪ್ರೌಢಶಾಲೆಯ ದೂ.08221-232653, ಬಸವೇಶ್ವರ ವಿದ್ಯಾರ್ಥಿನಿಲಯದ ದೂ.08221-232332, ಸಂಯೋಜನಾಧಿಕಾರಿಗಳ ಕಚೇರಿಯ ದೂ.08221-232217 ಗೆ ಸಂಪರ್ಕಿಸಬಹುದು ಎಂದು ಜೆಎಸ್‌ಎಸ್ ಶಾಲೆಯ ಆಡಳಿತಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA